No.MAG(3)/NPP/98/2023-2024

No.MAG(3)/NPP/99/2023-2024





ಸ್ಥಾಪನೆ : ೧೯೭೯

# ಹೊಂಗನಸು

ಬಿ.ಎಂ.ಶ್ರೀ. ಪ್ರತಿಷ್ಠಾನದ ವಾರ್ತಾಲಾಪ

ಹೊಂಗನಸು–೧೧೪

ಸಂಪುಟ: ೧೩ ಸಂಚಿಕೆ: ೨
Volume: 13 Issue: 2

ಮೇ ೨೦೨೫
May 2025

ಪುಟಗಳು-೮
Pages-8

ವಾರ್ಷಿಕ ಚಂದಾ ರೂ.೨೦/-
Annual Subscription Rs.20/-

ಶ್ರೀ ವಿಶ್ವಾವಸು ಸಂವತ್ಸರ
ಚೈತ್ರ-ವೈಶಾಖ ಮಾಸ

ಪ್ರಕಾಶಕರು
**ಬಿ.ಎಂ.ಶ್ರೀ. ಪ್ರತಿಷ್ಠಾನ**

ಪ್ರಧಾನ ಸಂಪಾದಕರು
**ಡಾ. ರಾಮೇಗೌಡ**

ಸಂಪಾದಕರು
**ಡಾ. ಬೆಳವಾಡಿ ಪ್ರಭಾಕರ**

**ಬಿ.ಎಂ.ಶ್ರೀ. ಪ್ರತಿಷ್ಠಾನ**
**ಎಂ.ವಿ.ಸೀ. ಸ್ನಾತಕೋತ್ತರ ಕೇಂದ್ರ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ
೩ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ
ಬೆಂಗಳೂರು - ೫೬೦೦೦೪
ಮೊಬೈಲ್ : ೯೯೩೨೮೧೨೧೨೩
ಇ-ಮೇಲ್ : bmsritrust@gmail.com
ಅಂತರ್ಜಾಲ : www.bmshri.org

**ಕಛೇರಿ ಸಮಯ**
ಬೆಳಗ್ಗೆ ೧೦-೩೦ ರಿಂದ ಸಂಜೆ ೫-೩೦
ವಾರದ ರಜಾ ದಿನ : ಭಾನುವಾರ

**ಚಂದಾ ವಿವರ**
ವಾರ್ಷಿಕ ಚಂದಾ : ರೂ. ೨೦/-
ಐದು ವರ್ಷಗಳ ಚಂದಾ : ರೂ. ೧೦೦/-

**ದಿ। ಪ್ರೊ. ಎಂ.ವಿ. ಸೀತಾರಾಮಯ್ಯ**
ಸಂಸ್ಥಾಪಕರು
**ಡಾ. ಆರ್. ಲಕ್ಷ್ಮೀನಾರಾಯಣ**
ಗೌರವಾಧ್ಯಕ್ಷರು


**ಪದಾಧಿಕಾರಿಗಳು**
- ಅಧ್ಯಕ್ಷ
  **ಡಾ. ಬೈರಮಂಗಲ ರಾಮೇಗೌಡ**
  ೯೩೪೧೨೫೮೧೪೨
- ಗೌರವ ಕಾರ್ಯದರ್ಶಿ
  **ಡಾ. ಶಾಂತರಾಜು**
  ೯೯೮೦೪೮೧೪೮೪
- ಗೌರವ ಕೋಶಾಧಿಕಾರಿ
  **ಚಂದ್ರಶೇಖರ ನಾದೂರು**
  ೯೯೪೫೦೦೪೮೪೬

**ಸಂಯೋಜನಾಧಿಕಾರಿಗಳು**
**ಬಿ.ಎಸ್. ಗುರುಪ್ರಸಾದ್**
ಹಸ್ತಪ್ರತಿ ವಿಭಾಗ
**ಡಾ. ಶಾಂತರಾಜು**
ಎಂ.ವಿ.ಸೀ. ಸಂಶೋಧನಾ ಕೇಂದ್ರ

**ಸಂನುಡಿ**

## ಪಿ.ವಿ.ಎನ್. ಇನ್ನು ಬರೀ ನೆನಪು



ಕನ್ನಡ ಪರ ಹೋರಾಟದಲ್ಲಿ ಮುಂಚೂಣಿಯಲ್ಲಿದ್ದ ಮತ್ತು ಬಿ.ಎಂ.ಶ್ರೀ. ಪ್ರತಿಷ್ಠಾನದ 'ಕೈಪಿಡಿ' ಎಂದೇ ಪ್ರಸಿದ್ಧರಾಗಿದ್ದ ಡಾ. ಪಿ.ವಿ.ನಾರಾಯಣ ಇನ್ನಿಲ್ಲ. ಆದರೂ ಇರುತ್ತಾರೆ –ಸಾಹಿತ್ಯಾಸಕ್ತರ ಮತ್ತು ಕನ್ನಡ ಹೋರಾಟಗಾರರ ಮನದಲ್ಲಿ ಹಾಗೂ ಭಾವಚಿತ್ರಪಟವಾಗಿ ರಾರಾಜಿಸುತ್ತಾ ಪ್ರತಿಷ್ಠಾನದ ಸಭಾ ಭವನದ ಗೋಡೆಯ ಮೇಲೆ. 'ಆಡು ಮುಟ್ಟದ ಸೊಪ್ಪಿಲ್ಲ' ಅನ್ನುವಂತೆ ಪಿ.ವಿ.ಎನ್. ಅವರು ಗೊತ್ತಿಲ್ಲ ಅನ್ನುವವರು ವಿರಳ. ಉತ್ತಮ ಅಧ್ಯಾಪಕರಾಗಿ, ಪ್ರಖರ ಪಾಂಡಿತ್ಯದ ವಾಗ್ಮಿಯಾಗಿ, ಕಾಯಕವೇ ಕೈಲಾಸವೆನ್ನುವುದನ್ನು ಚಾಚೂ ತಪ್ಪದೆ ಪಾಲಿಸಿದ ಕರ್ಮಯೋಗಿಯಾಗಿ, ನುಡಿದಂತೆ ನಡೆವ ಧೃತಿ ಪುರುಷನಾಗಿ, ಸತ್ಪ್ರೀತಿ ಪಾತ್ರರಾಗಿ, ಸರಳತೆಯ ಸಾಕಾರ ಮೂರ್ತಿಯಾಗಿ, ತಲೆ ಎತ್ತಿ ನಡೆದ ಛಲದಂಕಮಲ್ಲನಾಗಿ, ಎರಡು ತಿಂಗಳ ಹಿಂದಿನವರೆಗೂ ಪ್ರತಿಷ್ಠಾನದ ಕಾರ್ಯಕ್ರಮಗಳಲ್ಲಿ ಸಕ್ರಿಯವಾಗಿ ಭಾಗವಹಿಸುತ್ತಿದ್ದವರು ನಮ್ಮ ನಿಮ್ಮೆಲ್ಲರ ಪಿ.ವಿ.ಎನ್.

ಪ್ರತಿಷ್ಠಾನದ ಸ್ಥಾಪಕ ಪ್ರೊ. ಎಂ.ವಿ.ಸೀ.ಯವರ ಸಮೀಪವರ್ತಿಯಾಗಿ ಅವರ ಹೆಗಲಿಗೆ ಹೆಗಲುಕೊಟ್ಟು ಸಂಸ್ಥೆಯ ಏಳ್ಗೆಗೆ ಶ್ರಮಿಸಿದ ಧೀಮಂತ ವ್ಯಕ್ತಿಗಳಲ್ಲಿ ಅವರೂ ಒಬ್ಬರು. ಸದಸ್ಯರಾಗಿ, ಪದಾಧಿಕಾರಿಯಾಗಿ, ಅಧ್ಯಕ್ಷರಾಗಿ ಮತ್ತು ಕೊನೆಯ ಉಸಿರು ಇರುವ ತನಕ ಗೌರವಾಧ್ಯಕ್ಷರಾಗಿ ದುಡಿದ ಅವರ ಹೆಸರು ಮತ್ತು ಮಾತುಗಳನ್ನು ಪ್ರತಿಷ್ಠಾನದ ಗೋಡೆಗಳು ಪ್ರತಿಧ್ವನಿಸುವುದರಲ್ಲಿ ಎಳ್ಳಷ್ಟೂ ಸಂಶಯವಿಲ್ಲ.

'ಹೊಂಗನಸು' ಮಾಸ ಪತ್ರಿಕೆಗಂತೂ ಪಿ.ವಿ.ಎನ್. ತಿರುಳು ಅಷ್ಟೇ ಏಕೆ ಕರುಳಾಗಿದ್ದರು. ಅವರ ಮಾರ್ಗದರ್ಶನದ ಜೊತೆಗೆ 'ಮೂಲ ಚೂಲ' ಮುಂತಾದ ಅಂಕಣಗಳಿಂದ ಅದು ಪ್ರಬುದ್ಧ ಪತ್ರಿಕೆಯಾಗುವಂತೆ ಮಾಡಿದವರು. ಆಗಾಗ ಪ್ರತಿಷ್ಠಾನದ ವಿದ್ವತ್ ಪತ್ರಿಕೆ 'ಲೋಚನ'ಕ್ಕೂ ಬರೆಯುತ್ತಿದ್ದವರು.

ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಅವರ ಕುಟುಂಬ ವರ್ಗಕ್ಕೆ ನಮ್ಮ ಜೊತೆ ದುಃಖವನ್ನು ಭರಿಸುವ ಶಕ್ತಿಯು ಲಭ್ಯವಾಗಲಿ ಎಂದು ಹಾರೈಸೋಣ.

**ಡಾ. ಬೆಳವಾಡಿ ಪ್ರಭಾಕರ್**
ಸಂಪಾದಕರು

## ಡಾ. ಆರ್. ಲಕ್ಷ್ಮೀನಾರಾಯಣ ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವಾಧ್ಯಕ್ಷರಾಗಿ ಆಯ್ಕೆ



ಪಿ.ವಿ.ನಾರಾಯಣ ಅವರ ನಿಧನದಿಂದ ತೆರವಾಗಿದ್ದ ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವಾಧ್ಯಕ್ಷ ಸ್ಥಾನಕ್ಕೆ ಸರ್ಕಾರಿ ಕಾಲೇಜಿನಲ್ಲಿ ನಾಲ್ಕು ದಶಕಗಳ ಕಾಲ ಪ್ರಾಧ್ಯಾಪಕರಾಗಿ, ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾಗಿ ಸೇವೆ ಸಲ್ಲಿಸುತ್ತ–ಜೊತೆಜೊತೆಗೆ ವಿಮರ್ಶೆ, ಅನುವಾದ ಕ್ಷೇತ್ರಗಳಲ್ಲಿ ಕೆಲಸ ಮಾಡುತ್ತ ಸುಮಾರು 30 ಕೃತಿಗಳನ್ನು ರಚಿಸಿ, ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿ, ರಾಜ್ಯ ಸಾಹಿತ್ಯ ಅಕಾಡೆಮಿಯಿಂದ ಎರಡು ಬಾರಿ ಪುಸ್ತಕ ಬಹುಮಾನ, ಮರಿಯಪ್ಪ ಭಟ್ಟ ಪ್ರಶಸ್ತಿ, ಎಸ್.ವಿ. ಪರಮೇಶ್ವರಭಟ್ಟ ಪ್ರಶಸ್ತಿ ಮುಂತಾದವುಗಳಿಂದ ಪುರಸ್ಕೃತರಾದ ಮತ್ತು ಬಿ.ಎಂ.ಶ್ರೀ. ಪ್ರತಿಷ್ಠಾನದ ನಿಕಟಪೂರ್ವ ಅಧ್ಯಕ್ಷರಾದ ಡಾ.ಆರ್. ಲಕ್ಷ್ಮೀನಾರಾಯಣ ಅವರನ್ನು ಬಿ.ಎಂ.ಶ್ರೀ. ಪ್ರತಿಷ್ಠಾನದ ಗೌರವಾಧ್ಯಕ್ಷರಾಗಿ ಕಾರ್ಯಕಾರಿ ಸಮಿತಿಯು ಸರ್ವಾನುಮತದಿಂದ ಆಯ್ಕೆ ಮಾಡಿದೆ. ಅವರಿಗೆ **ಅಭಿನಂದನೆಗಳು**.

**ದಿನಾಂಕ ೩.೪.೨೦೨೫ ರಂದು ನಿಧನರಾದ ಡಾ. ಪಿ.ವಿ. ನಾರಾಯಣ ಅವರ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ದಿನಾಂಕ ೭.೪.೨೦೨೫ ರಂದು ಏರ್ಪಡಿಸಲಾಗಿತ್ತು. ಬಿ.ಎಂ.ಶ್ರೀ. ಪ್ರತಿಷ್ಠಾನ, ಉದಯಭಾನು ಕಲಾಸಂಘ, ಕನ್ನಡ ಗೆಳೆಯರ ಬಳಗ, ಕರ್ನಾಟಕ ವಿಕಾಸ ರಂಗ ಸಹಯೋಗದಲ್ಲಿ ಈ ಕಾರ್ಯಕ್ರಮ ನಡೆಯಿತು.**



ಮೊದಲಿಗೆ ಪಿ.ವಿ. ನಾರಾಯಣ ಅವರ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿ ಕಾರ್ಯಕ್ರಮ ಪ್ರಾರಂಭಿಸಲಾಯಿತು.

ಹಿರಿಯ ಲೇಖಕರಾದ ಹಂಪನಾ ಮಾತಾಡಿ "ಕನ್ನಡ ಸಂಶೋಧನಾ ಕ್ಷೇತ್ರಕ್ಕೆ ನಾರಾಯಣ ಅವರ ಕೊಡುಗೆ ಅಪಾರ. ಕನ್ನಡ ಸಾಹಿತ್ಯದ ವೈವಿಧ್ಯಮಯ ಕ್ಷೇತ್ರಗಳಲ್ಲಿ ದುಡಿದವರು ಡಾ. ಪಿ.ವಿ. ನಾರಾಯಣ. ಅವರು ಸ್ನೇಹಜೀವಿಯಾಗಿದ್ದರು. ಅವರ ಸಂಶೋಧನೆ, ಸಾಧನೆಗಳನ್ನು ಇಂದಿನ ಕಿರಿಯರು ಅನುಸರಿಸಲಿ" ಎಂಬ ಆಶಯ ವ್ಯಕ್ತಪಡಿಸಿದರು.

ಅವರು ಪ್ರಧಾನ್ ಕುಟುಂಬಕ್ಕೆ ಸೇರಿದವರು. ಅವರ ವಂಶದ ವೆಂಕಾಮಾತ್ಯ ಎಂಬುವವರು ರಚಿಸಿದ ೯೭೦೦ ಷಟ್ಪದಿಗಳಲ್ಲಿ ರಚಿತವಾಗಿರುವ ಮಹಾಕಾವ್ಯದ ಸಂಪುಟಗಳನ್ನು ಹೋದವರ್ಷ ಪ್ರಕಟಿಸಿದ್ದನ್ನು ನೆನಪಿಸಿಕೊಂಡರು.

ಹಿರಿಯ ವಿದ್ವಾಂಸರಾದ ಡಾ.ಮಲ್ಲೇಪುರಂ ಜಿ ವೆಂಕಟೇಶ್ ಅವರು ತಮ್ಮ ಮತ್ತು ಪಿ.ವಿ. ನಾರಾಯಣ ಅವರ ಸುಮಾರು ೪೦ ವರ್ಷಗಳ ಒಡನಾಟವನ್ನು ನೆನಪಿಸಿಕೊಂಡರು. ಸಾಹಿತ್ಯ ಕ್ಷೇತ್ರಕ್ಕೆ ಅವರು ಕೊಟ್ಟಿರುವ ಕೊಡುಗೆಯನ್ನು ಸ್ಮರಿಸಿದರು. ಡಾ. ಆರ್. ಲಕ್ಷ್ಮೀನಾರಾಯಣ ಅವರು ತಮ್ಮ ಮತ್ತು ಪಿ.ವಿ. ನಾರಾಯಣ ಅವರ ಸುಮಾರು ೫೦ ವರ್ಷಗಳ ಒಡನಾಟವನ್ನು ಹಂಚಿಕೊಂಡರು. ಅವರ ಗ್ರಂಥ ಸಂಪಾದನೆ, ಅನುವಾದ ಸಾಹಿತ್ಯ, ನಿಘಂಟು ಕ್ಷೇತ್ರಕ್ಕೆ ಕೊಟ್ಟಿರುವ ಕೊಡುಗೆಯನ್ನು ಸ್ಮರಿಸಿದರು.

ಪಿ.ವಿ. ನಾರಾಯಣ ಅವರು ತಮ್ಮ ಪಿಎಚ್.ಡಿ. ಮಾರ್ಗದರ್ಶಕರಾಗಿ ಬಹಳ ಪ್ರೀತಿಯಿಂದ ನಡೆಸಿಕೊಂಡರು ಎಂಬ ವಿಚಾರವನ್ನು ತಿಳಿಸಿದರು.

ಇತಿಹಾಸ ಅಕಾಡೆಮಿಯ ಅಧ್ಯಕ್ಷರಾದ ಡಾ. ದೇವರಕೊಂಡಾರೆಡ್ಡಿ ಅವರು ಮಾತನಾಡುತ್ತ ನಾರಾಯಣರು ಬಿ.ಎಂ.ಶ್ರೀ. ಪ್ರತಿಷ್ಠಾನದ ಅಧ್ಯಕ್ಷರಾಗಿದ್ದ ಸಂದರ್ಭದಲ್ಲಿ ಇತಿಹಾಸ ಅಕಾಡೆಮಿಗೆ ಗ್ರಂಥಾಲಯದಲ್ಲಿ ಅವಕಾಶ ಮಾಡಿಕೊಟ್ಟದ್ದನ್ನು ನೆನಪಿಸಿಕೊಂಡು ಅವರ ಸಹಾಯ ಗುಣವನ್ನು ಮೆಚ್ಚಿಕೊಂಡರು.

ಸಾಹಿತ್ಯ ಪರಿಷತ್ತಿನ ಮಾಜಿ ಅಧ್ಯಕ್ಷರಾದ ಡಾ. ಮನುಬಳಿಗಾರ ಅವರು ನಾರಾಯಣ ಅವರು ಕನ್ನಡ ನಾಡು ನುಡಿ ವಿಷಯದಲ್ಲಿ ಮಾಡುತ್ತಿದ್ದ ಹೋರಾಟದ ವೈಖರಿಯನ್ನು ನೆನಪಿಸಿಕೊಂಡರು. ಭಾಷೆಯ ವಿಚಾರ ಬಂದಾಗ ಅವರು ನಿಷ್ಠುರವಾಗಿ ಮಾತಾಡುತ್ತಿದ್ದರು ಎಂಬುದನ್ನು ತಿಳಿಸಿದರು.



ಕನ್ನಡ ಗೆಳೆಯರ ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ್ ಕನ್ನಡ ಚಳುವಳಿಯಲ್ಲಿ ನಾರಾಯಣ ಅವರ ಪಾತ್ರ ಎಂಥದ್ದೆಂದು ವಿವರಿಸಿದರು.

ಡಾ. ಚಿದಾನಂದಮೂರ್ತಿ, ಪಿ.ವಿ. ನಾರಾಯಣ ಅವರು ಶಕ್ತಿಕೇಂದ್ರದ ಮೂಲಕ ಮಾಡಿದ ಹೋರಾಟದ ರೀತಿಯನ್ನು ಹಾಗೂ ಗೋಕಾಕ್ ಚಳುವಳಿಗೆ ಅವರ ಕೊಡುಗೆಯನ್ನು ಮೆಲುಕು ಹಾಕಿದರು. 'ಸಾಹಿತಿಗಳು ಕಲಾವಿದರ ಬಳಗ'ದ ಮೂಲಕ ಯುವಕರ ತಂಡವನ್ನೇ ಕಟ್ಟಿ ಹೋರಾಟಕ್ಕೆ ಹೊಸ ಸ್ವರೂಪ ನೀಡಿದವರು ಪಿ.ವಿ. ನಾರಾಯಣ ಎಂದು ಸ್ಮರಿಸಿದರು.

ಕರ್ನಾಟಕ ವಿಕಾಸರಂಗದ ವ.ಚ. ಚನ್ನೇಗೌಡರು ಮಾತಾಡಿ ನೃಪತುಂಗ ಪ್ರಶಸ್ತಿ ಪ್ರಾರಂಭ ಮಾಡುವ ಸಂದರ್ಭದಲ್ಲಿ ನಾರಾಯಣ ಅವರು ಕೊಟ್ಟಿದ್ದ ಸಲಹೆಯನ್ನು ನೆನಪಿಸಿಕೊಂಡರು. ಕನ್ನಡ ಭಾಷೆಯ ಬಗ್ಗೆ, ಕನ್ನಡತನದ ಬಗ್ಗೆ ಪ್ರೀತಿಯಿದ್ದ ಅವರು ಕನ್ನಡ ಚಳುವಳಿಗೆ ದೊಡ್ಡ ಮೌಲ್ಯವನ್ನು ತಂದುಕೊಟ್ಟವರು ಎಂಬುದನ್ನು ತಿಳಿಸಿದರು.

ಉದಯಭಾನು ಕಲಾಸಂಘದ ಕಾರ್ಯದರ್ಶಿ ರಾಧಾಕೃಷ್ಣ ಅವರು ಮಾತನಾಡಿ, ಉದಯಭಾನು ಕಲಾಸಂಘದ ಸುವರ್ಣ ಮಹೋತ್ಸವ ಸಂದರ್ಭದಲ್ಲಿ ಸುವರ್ಣ ಪುಸ್ತಕಮಾಲೆಯ ಸಂಪಾದಕರಾಗಿ ಕಾರ್ಯನಿರ್ವಹಿಸಿದ್ದು, ಉನ್ನತ ಅಧ್ಯಯನ ಕೇಂದ್ರವನ್ನು ಸ್ಥಾಪಿಸುವಲ್ಲಿ ಅವರು ನೀಡಿದ ಮಾರ್ಗದರ್ಶನ, ಸಹಕಾರಗಳನ್ನು ನೆನಸಿಕೊಂಡರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಕಾರ್ಯದರ್ಶಿ ಡಾ. ಶಾಂತರಾಜು ಅವರು ಕಾರ್ಯಕ್ರಮದ ಪ್ರಾಸ್ತಾವಿಕ ನುಡಿಗಳನ್ನು ಹೇಳಿ ಕಾರ್ಯಕ್ರಮವನ್ನು ನಿರ್ವಹಿಸಿದರು...೨೦೨೩ರಲ್ಲಿ ಡಾ. ಪಿ.ವಿ. ನಾರಾಯಣ ಅವರ ಅಭಿನಂದನ ಗ್ರಂಥ 'ಕನ್ನಡ ಪ್ರಧಾನ' ಪ್ರಕಟಿಸಿದ ವಿಚಾರವನ್ನು ತಿಳಿಸಿದರು.

ಪ್ರತಿಷ್ಠಾನದ ಅಧ್ಯಕ್ಷರಾದ ಡಾ. ಬೈರಮಂಗಲ ರಾಮೇಗೌಡ ಅವರು ಮಾತಾಡಿ..ನಾರಾಯಣ ಅವರು ಬಹುಮುಖ ವ್ಯಕ್ತಿತ್ವದ ಬಹು ಆಯಾಮದ ಲೇಖಕ. ನಾಡಿನಾದ್ಯಂತ ಇರುವ ಶಿಷ್ಯ ಬಳಗ ಅವರ ಸಾವಿನಿಂದ ನೊಂದಿದೆ. ಪ್ರತಿಷ್ಠಾನ ಮತ್ತು ಇಲ್ಲಿನ ಕಾರ್ಯಕ್ರಮಗಳ ಬಗ್ಗೆ ಬಹಳ ಪ್ರೀತಿ ಅವರಿಗೆ. ಪ್ರತಿಷ್ಠಾನದ ಪ್ರತಿಯೊಂದು ಕಾರ್ಯಕ್ರಮಗಳಲ್ಲಿ ಅವರು ತಪ್ಪದೆ ಇರುತ್ತಿದ್ದರು.

ಹಳಗನ್ನಡ ಸಾಹಿತ್ಯದ ಬಗ್ಗೆ ಆಸಕ್ತಿ ಬಹಳ. ಪ್ರತಿಷ್ಠಾನದಲ್ಲಿ ಅವರು ಪ್ರಾರಂಭಿಸಿದ ಹಳಗನ್ನಡದ ತರಗತಿಯಲ್ಲಿ ಇಂದು ೭೫ ವಿದ್ಯಾರ್ಥಿಗಳು ಕಲಿಯುತ್ತಿದ್ದಾರೆ ಎಂಬುದು ಸಂತಸದ ವಿಷಯ ಎಂದು ತಿಳಿಸಿ ಶ್ರದ್ಧಾಂಜಲಿಯನ್ನು ಅರ್ಪಿಸಿದರು.

ಪಿ.ವಿ. ನಾರಾಯಣ ಅವರ ಬಂಧುಗಳು, ಸ್ನೇಹಿತರು, ಅಭಿಮಾನಿವರ್ಗ ಹೆಚ್ಚಿನ ಸಂಖ್ಯೆಯಲ್ಲಿ ಸೇರಿ ಸಭಾಂಗಣ ತುಂಬಿದ್ದು ನಾರಾಯಣ ಅವರು ಗಳಿಸಿದ್ದ ಜನಪ್ರಿಯತೆಗೆ ಸಾಕ್ಷಿಯಾಯಿತು.

## ಸೂ.ವೆಂ.ಆರಗ ವಿಮರ್ಶಾ ಪ್ರಶಸ್ತಿ ಹಾಗೂ ಡಾ. ವಿಜಯಾ ಸುಬ್ಬರಾಜ್ ಗಣ್ಯ ಲೇಖಕಿ ಪ್ರಶಸ್ತಿ ಪ್ರದಾನ ಸಮಾರಂಭ
## ದಿನಾಂಕ : ೧೯/೦೪/೨೦೨೫






ಡಾ. ಲತಾ ಗುತ್ತಿ, ಡಾ. ಪ್ರಸನ್ನ ನಂಜಾಪುರ, ಡಾ. ವಿಜಯ ಸುಬ್ಬರಾಜ್ ಮತ್ತು ಡಾ. ಬೈರಮಂಗಲ ರಾಮೇಗೌಡ, ಡಾ. ಶಾಂತರಾಜು ಅವರುಗಳು ವೇದಿಕೆಯಲ್ಲಿ ಉಪಸ್ಥಿತರಾಗುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು.

ಕಾರ್ಯಕ್ರಮ ನಿರೂಪಣೆ ಬಿ.ಎಂ.ಶ್ರೀ. ಪ್ರತಿಷ್ಠಾನದ ಖಜಾಂಚಿ ಶ್ರೀ ಚಂದ್ರಶೇಖರ ನಾದೂರ್ ಅವರಿಂದ.

ಡಾ. ಎಚ್ಚೆಸ್ವಿ ಅವರ ರಚನೆ – "ಕರುಣಿಸಿ ಪೊರೆಯೇ ಶಾರದ ಮಾತೆಯೇ" ಹಾಡನ್ನು ಪ್ರಾರ್ಥನೆಯಾಗಿ ವಿದುಷಿ ಸುಮಲತಾ ಮಂಜುನಾಥ್ ಹಾಡಿ ಕಾರ್ಯಕ್ರಮಕ್ಕೆ ವಿಧ್ಯುಕ್ತ ಚಾಲನೆ ನೀಡಿದರು.

ಶ್ರೀ ಗುರುಪ್ರಸಾದ್ ಅವರು ದತ್ತಿ ಮತ್ತು ದಾನಿಗಳ ಪರಿಚಯ ಮಾಡಿಕೊಟ್ಟರು.

ಡಾ. ವಿಜಯಾ ಸುಬ್ಬರಾಜ್ ಅವರ ಜನ್ಮದಿನ ೨೦ನೇ ಏಪ್ರಿಲ್. ಆ ದಿನದ ಆಸುಪಾಸಿನಲ್ಲೇ ಈ ದತ್ತಿ ಕಾರ್ಯಕ್ರಮ ನಡೆಯುವುದೆಂದು ಶ್ರೀ ಗುರುಪ್ರಸಾದ್ ಅವರು ತಿಳಿಸಿದರು. "ನಾನು ಸಾಹಿತ್ಯ ಕ್ಷೇತ್ರದಲ್ಲಿ ಬಹಳಷ್ಟು ಪ್ರಶಸ್ತಿಗಳನ್ನು ಪಡೆದಿದ್ದು, ಮುಂದೆ ಸಮಾಜಕ್ಕೆ ಹಾಗೂ ಹೊಸ ಬರಹಗಾರರಿಗೆ ಪ್ರಶಸ್ತಿಗಳನ್ನು ನೀಡಬೇಕೆಂದು ನಿರ್ಧರಿಸಿದೆ" ಎಂದು ಹೇಳಿದ ವಿಜಯಾ ಸುಬ್ಬರಾಜ್ ಅವರ ಮಾತುಗಳನ್ನು ಮೊದಲು ಉಲ್ಲೇಖಿಸಿದರು.

ನಂತರ ಸೂ.ವೆಂ.ಆರಗ ಅವರ ಜೀವನ ಮತ್ತು ಸಾಹಿತ್ಯ ಪರಿಚಯ ಮಾಡಲಾಯಿತು. ಶ್ರೀ ಆರಗ ಅವರು ತಮ್ಮ ಮಕ್ಕಳಿಗೆ ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ದತ್ತಿ ಇಡಬೇಕೆಂಬ ಇಚ್ಛೆಯನ್ನು ವ್ಯಕ್ತಪಡಿಸಿದ್ದರು. ಮೇ ೧೯೮೭ರಲ್ಲಿ ಶ್ರೀ ಆರಗ ಅವರ ಮರಣದ ನಂತರ ಅವರ ಮೂವರು ಮಕ್ಕಳು ಪ್ರತಿಷ್ಠಾನಕ್ಕೆ ಬಂದು ತಮ್ಮ ತಂದೆಯ ಇಚ್ಛೆಯನ್ನು ಪೂರೈಸಿದರು ಎಂದು ಗುರುಪ್ರಸಾದ್ ತಿಳಿಸಿದರು.

ವಿಜಯಾ ಸುಬ್ಬರಾಜ್ ಅವರನ್ನು ಪರಿಚಯಿಸುವಾಗ ಹಿಂದೊಮ್ಮೆ ನ್ಯಾಷನಲ್ ಕಾಲೇಜಿನ ಆವರಣದಲ್ಲಿ ನಡೆದ ಒಂದು ಕಾರ್ಯಕ್ರಮದಲ್ಲಿ ಪ್ರೊ.ಜಿ.ವೆಂಕಟಸುಬ್ಬಯನವರು ವಿಜಯಾ ಸುಬ್ಬರಾಜ್ ಅವರನ್ನು ಕರೆಯುವಾಗ "ಬಾರಮ್ಮ ಪಂಚಭಾಷಾ ತಾರೆ" ಎಂದದ್ದನ್ನು ಪ್ರೇಕ್ಷಕರ ಗಮನಕ್ಕೆ ತರಲಾಯಿತು. ಕನ್ನಡ, ಇಂಗ್ಲಿಷ್, ಹಿಂದಿ, ಫ್ರೆಂಚ್ ಮತ್ತು ತೆಲುಗು ಭಾಷೆಗಳಲ್ಲಿ ಇವರ ಸಾಹಿತ್ಯ ಕೃಷಿ ನಡೆದಿದ್ದು ಒಟ್ಟು ಎಪ್ಪತ್ತಕ್ಕೂ ಹೆಚ್ಚು ಪುಸ್ತಕಗಳನ್ನು ಸಾಹಿತ್ಯ ಲೋಕಕ್ಕೆ ನೀಡಿದ್ದಾರೆ. ಆದರ್ಶ ಶಿಕ್ಷಕ ಪ್ರಶಸ್ತಿ, ಗೊರೂರು ಪ್ರಶಸ್ತಿ ಮತ್ತು ಅನುವಾದಕ್ಕೆ ಸಂಬಂಧಿಸಿದಂತೆ ಹಲವಾರು ಪ್ರಶಸ್ತಿಗಳನ್ನು ಪಡೆದಿದ್ದಾರೆ. ಕವನ, ಕಥೆ, ನಾಟಕ, ಕಾದಂಬರಿ, ವಿಮರ್ಶೆ ಈ ಐದು ಪ್ರಕಾರಗಳಲ್ಲಿ ಪ್ರತಿ ವರ್ಷ ಒಂದೊಂದು ಪ್ರಕಾರಕ್ಕೆ ಪ್ರಶಸ್ತಿ ನೀಡಬೇಕೆನ್ನುವ ವಿಜಯಾ ಸುಬ್ಬರಾಜ್ ಅವರ ಆಶಯದ ಬಗೆಗೂ ಆಯ್ಕೆ ಸಮಿತಿಯ ಸದಸ್ಯರ ಬಗ್ಗೆಯೂ ತಿಳಿಸಲಾಯಿತು.

ಪ್ರತಿಷ್ಠಾನದ ಕಾರ್ಯದರ್ಶಿ ಡಾ. ಶಾಂತರಾಜುರವರಿಂದ ಸ್ವಾಗತ ಭಾಷಣ. ವೇದಿಕೆಯ ಮೇಲಿದ್ದ ಗಣ್ಯ ವ್ಯಕ್ತಿಗಳ ಸಾಧನೆಗಳ ಬಗ್ಗೆ ಒಂದೆರಡು ವಿಷಯಗಳನ್ನು ಪ್ರಸ್ತಾಪಿಸುತ್ತಾ ಸ್ವಾಗತ ಕೋರುವ ಅವರ ಭಾಷಣ ಎಂದಿನಂತೆ ಅಚುಕಟ್ಟಾಗಿತ್ತು.

**ಪ್ರಶಸ್ತಿ ಪ್ರದಾನ**

ಮೊದಲಿಗೆ ಡಾ. ಲತಾ ಗುತ್ತಿಯವರ ಪರಿಚಯ ಶ್ರೀ ಚಂದ್ರಶೇಖರ ನಾದೂರ್ ಅವರಿಂದ. ಶ್ರೀಮತಿ ವಿಜಯಾಸುಬ್ಬರಾಜ್ ಗಣ್ಯ ಲೇಖಕಿ ಪ್ರಶಸ್ತಿಗೆ ಭಾಜನರಾದ ಶ್ರೀಮತಿ ಲತಾ ಗುತ್ತಿಯವರ ಸಾಹಿತ್ಯ ಯಾನ, ಈವರೆಗೆ ಲೋಕಾರ್ಪಣೆಗೊಂಡ ಅವರ ಕೃತಿಗಳು, ಹೆಚ್ಚು ಪ್ರಸಿದ್ಧಿ ಪಡೆದ ಅವರ ಹದಿನೈದು ದೇಶಗಳ ಪ್ರವಾಸ, ಅಲ್ಲಿನ ಬದುಕು ಹಾಗೂ ಸಂಸ್ಕೃತಿಯನ್ನು ಪರಿಚಯಿಸಿದ ಪ್ರವಾಸ ಸಾಹಿತ್ಯ, ಅವರು ಪಡೆದ ಪ್ರಶಸ್ತಿಗಳು ಹೀಗೆ ಹಲವು ವಿಷಯಗಳನ್ನು ಪ್ರೇಕ್ಷಕರಿಗೆ ತಿಳಿಸಿದರು.

ನಂತರ ಡಾ. ಪ್ರಸನ್ನ ನಂಜಾಪುರ ಅವರ ಪರಿಚಯ ಮಾಡಿಕೊಟ್ಟರು. ೨೦೨೪ ರ ಸೂ.ವೆಂ.ಆರಗ ವಿಮರ್ಶಾ ಪ್ರಶಸ್ತಿಗೆ ಭಾಜನರಾದ ಡಾ. ಪ್ರಸನ್ನ ನಂಜಾಪುರ ಅವರ ಬದುಕು, ವಿದ್ಯಾಭ್ಯಾಸ ಹಾಗು ಅವರ ಸಾಹಿತ್ಯ ಕೃಷಿಯ ಬಗ್ಗೆ ವಿವರವಾಗಿ ತಿಳಿಸಿಕೊಡಲಾಯಿತು. ಡಾ. ಬೈರಮಂಗಲ ರಾಮೇಗೌಡ, ಮುಖ್ಯ ಅತಿಥಿಗಳಾದ ಶ್ರೀ ಕೆ. ಮೋಹನ್ ದೇವ್ ಆಳ್ವ ಮತ್ತು ಇತರ ಗಣ್ಯರು ಇವರನ್ನು ಸನ್ಮಾನಿಸಿದರು.

ಮುಖ್ಯ ಅತಿಥಿಯಾಗಿ ಆಗಮಿಸಿದ್ದ ಶ್ರೀ ಕೆ. ಮೋಹನ್ ದೇವ್ ಆಳ್ವ ಅವರು ಮಾತನಾಡುತ್ತಾ ಮೈಸೂರು ರಾಜ್ಯದಲ್ಲಿ ವಯಸ್ಕರ ಶಿಕ್ಷಣ ಸಮಿತಿಯ ಉಪಾಧ್ಯಕ್ಷರಾಗಿದ್ದ ದಿನಗಳನ್ನು ನೆನಪಿಸಿಕೊಂಡರು. ಅಲ್ಲಿ ಕನ್ನಡ ಭಾಷೆ, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಇವರು ತೊಡಗಿಸಿಕೊಂಡದ್ದು ಮತ್ತು ಕನ್ನಡ ಸಾಹಿತ್ಯದಲ್ಲಿ ಹೆಸರುಮಾಡಿದ್ದ ಹಿರಿಯ ಸಾಹಿತಿಗಳ ಜೊತೆಯ ಇವರ ಒಡನಾಟವನ್ನು ಮೆಲುಕುಹಾಕಿದರು. ಸನ್ಮಾನಕ್ಕೆ ಸಾಧಕರನ್ನು ಆರಿಸುವಾಗ ಬಿ.ಎಂ.ಶ್ರೀ. ಪ್ರತಿಷ್ಠಾನ ಪಾಲಿಸುವ ಪಾರದರ್ಶಕತೆಯನ್ನು ಶ್ಲಾಘಿಸಿದರು.

**ಪ್ರಶಸ್ತಿ ಪುರಸ್ಕೃತರ ಮಾತುಗಳು**

ಡಾ. ಲತಾ ಗುತ್ತಿಯವರು ತಮ್ಮನ್ನು ವಿಜಯಾ ಸುಬ್ಬರಾಜ್ ಗಣ್ಯ ಲೇಖಕಿ ಪ್ರಶಸ್ತಿಗೆ ಆಯ್ಕೆ ಮಾಡಿದ್ದು ಸಂತೋಷತಂದಿದೆ. ಕನ್ನಡ ಸಾಹಿತ್ಯ ತಮ್ಮನ್ನು ಈ ಮಟ್ಟಕ್ಕೆ ಕೊಂಡೊಯ್ಯತ್ತದೆ ಎಂದು ಎಣಿಸಿರಲಿಲ್ಲ. ವಿದೇಶದಿಂದ ಹಿಂದಿರುಗಿದಾಗ ಇಲ್ಲಿದ್ದ ಸಾಹಿತ್ಯ ವಾತಾವರಣ ಹೆಚ್ಚಾಗಿ ಬರೆಯಲು ಉತ್ತೇಜನ ನೀಡಿತು. ಡಾ.ವಿಜಯಾ ಸುಬ್ಬರಾಜ್ ಅವರು ಸಮಾಜಸೇವೆ ಮಾಡುತ್ತಲೇ ಅಧ್ಯಾಪಕಿಯಾಗಿ, ಪ್ರಾಂಶುಪಾಲರಾಗಿ ನೂರು ಪುಸ್ತಕಗಳನ್ನು ಬರೆದಿರುವುದು ಒಂದು ಪವಾಡವೇ ಸರಿ ಎಂದು ಹೇಳಿದರು.

ಡಾ. ಪ್ರಸನ್ನ ನಂಜಾಪುರ ಅವರು ವಿಮರ್ಶೆ ಕ್ಷೇತ್ರಕ್ಕೆ ತಾವು ನೀಡಿದ

ಕೊಡುಗೆಯನ್ನು ಗುರುತಿಸಿದ ಪ್ರತಿಷ್ಠಾನಕ್ಕೆ ಧನ್ಯವಾದಗಳನ್ನು ತಿಳಿಸಿದರು. ಸೂ. ವೆಂ.ಆರಗ ವಿಮರ್ಶಾ ಪ್ರಶಸ್ತಿ ಪಡೆದು ಈಗ ನನ್ನ ಜವಾಬ್ದಾರಿ ಹೆಚ್ಚಾಗಿದೆ. ಅಧ್ಯಯನಕ್ಕೆ ಗ್ರಂಥಸಂಪಾದನೆಗೆಂದು ಪ್ರತಿಷ್ಠಾನಕ್ಕೆ ಬರಲು ಆರಂಭಿಸಿದ ಮೇಲೆ ಇಲ್ಲಿ ನಡೆಯುತ್ತಿದ್ದ ಹಸ್ತಪ್ರತಿ ಮತ್ತು ಗ್ರಂಥಸಂಪಾದನೆಯ ಮೇಲೆ ಆಸಕ್ತಿ ಬಂದಿತು. ಹೀಗೆಯೇ ಪ್ರತಿಷ್ಠಾನದೊಂದಿಗಿನ ಒಡನಾಟ ಹೆಚ್ಚಾಯಿತು ಎಂದು ತಿಳಿಸಿದರು.

ದತ್ತಿ ಸ್ಥಾಪಿಸಿರುವ ಡಾ. ವಿಜಯಾ ಸುಬ್ಬರಾಜ್ ಅವರು ತಮ್ಮ ಮತ್ತು ಲತಾ ಗುತ್ತಿಯವರ ಬಹಳ ವರ್ಷದ ಗೆಳೆತನ ಮತ್ತು ಒಡನಾಟದ ಬಗ್ಗೆ ತಿಳಿಸಿದರು. ಲತಾ ಗುತ್ತಿಯವರ ಸಾಹಿತ್ಯದ ಬಗ್ಗೆ ವಿವರಗಳನ್ನು ನೀಡಿದರು. ಎಮ್.ಇ.ಎಸ್. ಕಾಲೇಜಿನಲ್ಲಿ ತಾವು ಅಧ್ಯಾಪಕಿಯಾಗಿದ್ದಾಗ ವಿದ್ಯಾರ್ಥಿಗಳನ್ನು ಅಂಡಮಾನ್‌ಗೆ ಕರೆದುಕೊಂಡುಹೋಗಿ ಅಲ್ಲಿ ಅವರಿಗೆ ಆದ ಅದ್ಭುತ ಅನುಭವಗಳನ್ನು ಹಂಚಿಕೊಂಡರು. ವಿವಿಧ ಸಂಘ ಸಂಸ್ಥೆಗಳು, ವಿದ್ಯಾಸಂಸ್ಥೆಗಳು ತಮ್ಮ ಸಾಹಿತ್ಯ ಕೃಷಿಯನ್ನು ಗುರುತಿಸಿದ ಬಗ್ಗೆ ಗೌರವ ಮತ್ತು ಹೆಮ್ಮೆ ಇದೆ ಎಂದು ತಿಳಿಸಿದರು.

ಡಾ. ಬೈರಮಂಗಲ ರಾಮೇಗೌಡರು ಅಧ್ಯಕ್ಷೀಯ ಭಾಷಣವನ್ನು ಮಾಡುತ್ತಾ "ಪ್ರಶಸ್ತಿ ಸಮಾರಂಭ ಎಂಬುದು ಸಂತೋಷವನ್ನು ಹಂಚುವ ಕಾರ್ಯಕ್ರಮ. ಇಲ್ಲಿ ಪ್ರಶಸ್ತಿಯನ್ನು ನೀಡುವವರು, ಪ್ರಶಸ್ತಿಯನ್ನು ಪಡೆಯುವವರು ಮತ್ತು ಈ ಕಾರ್ಯಕ್ರಮಕ್ಕೆ ಸಾಕ್ಷಿಯಾಗುವವರು ಎಲ್ಲರೂ ಸಂತೋಷ ಪಡೆಯುತ್ತಾರೆ. ಹಲವರು ಪ್ರವಾಸವನ್ನು ಮನರಂಜನೆಯಾಗಿ ತೆಗೆದುಕೊಂಡರೆ, ಕೆಲವರು ಮಾತ್ರ ಅದನ್ನು ಪ್ರವಾಸ ಸಾಹಿತ್ಯ ರೂಪದಲ್ಲಿ ತರುತ್ತಾರೆ. ಈ ರೀತಿಯ ಜನರಲ್ಲಿ ಲತಾಗುತ್ತಿ ಅವರ ಸಾಧನೆ ಅದ್ಭುತ" ಎಂದು ತಿಳಿಸಿದರು. "ಕನ್ನಡ ಅಧ್ಯಯನ ಕೇಂದ್ರಕ್ಕೆ ಭೇಟಿಕೊಟ್ಟಾಗ ಮಾಡಿದ ಭಾಷಣಗಳನ್ನು, ನೀಡಿದ ಉಪನ್ಯಾಸಗಳನ್ನು ಕೇಳಿ ಪ್ರಸನ್ನ ನಂಜಾಪುರ ಅವರು ತಮ್ಮನ್ನು ಗುರುಗಳಾಗಿ ಸ್ವೀಕರಿಸಿರುವುದು ಸಂತೋಷದ ವಿಷಯ. ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಇನ್ನೂ ಹೆಚ್ಚು ಕೆಲಸ ಮಾಡಲು ಅವರಿಗೆ ಅವಕಾಶವಿದೆ. ಅದರಲ್ಲೂ ವಿಮರ್ಶೆ ಕ್ಷೇತ್ರದಲ್ಲಿ ಹೆಚ್ಚು ಕೆಲಸ ಮಾಡುವ ಆಸೆಯನ್ನು ಮತ್ತು ಗುರಿಯನ್ನು ಇಟ್ಟುಕೊಂಡಿರುವ ಪ್ರಸನ್ನ ಅವರಿಗೆ ಸೂ.ವೆಂ. ಆರಗ ಪ್ರಶಸ್ತಿ ದೊರಕಿರುವುದು ಸೂಕ್ತವಾಗಿದೆ" ಎಂದು ಹೇಳಿದರು. ಶ್ರೀ ಮೋಹನ ದೇವ್ ಆಳ್ವ ಅವರ ಸಂಗೀತ ಅಭಿಮಾನದ ಬಗ್ಗೆಯೂ ಬಗ್ಗೆ ಮೆಚ್ಚಿಗೆ ವ್ಯಕ್ತಪಡಿಸಿದರು.

ಶ್ರೀ ಚಂದ್ರಶೇಖರ್ ನಾದೂರ್ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ವಸುಂಧರ ಮತ್ತು ಪರಮಶಿವಯ್ಯ ದತ್ತಿ ಕಾರ್ಯಕ್ರಮ





**ಹಸ್ತಪ್ರತಿ ವಿಭಾಗದ ಸಂಯೋಜಕರಾದ ಶ್ರೀ ಬಿ.ಎಸ್. ಗುರುಪ್ರಸಾದ್ ಅವರಿಗೆ ಗೌರವ ಸಮರ್ಪಣೆ**

ದಿನಾಂಕ ೨೨.೪.೨೦೨೫ ಮಂಗಳವಾರ ಸಂಜೆ ಶ್ರೀಮತಿ ವಸುಂಧರ ಮತ್ತು ಶ್ರೀ ಪರಮಶಿವಯ್ಯ –ಹಸ್ತಪ್ರತಿ ಮತ್ತು ತಾಳೆಗರಿ ಅಧ್ಯಯನ ಪುರಸ್ಕಾರ ಪ್ರದಾನ ಸಮಾರಂಭ ನಡೆಯಿತು. ಹಸ್ತಪ್ರತಿ ಸಂರಕ್ಷಕರು, ವಿಷ್ಣುಗುಪ್ತ ವಿದ್ಯಾಕೇಂದ್ರ, ಗೋಕರ್ಣ. ಕೆಳದಿ ಮ್ಯೂಸಿಯಂನ ಹಸ್ತಪ್ರತಿ ವಿಭಾಗದ ನಿವೃತ್ತ ಸಂರಕ್ಷಣಾ ಸಹಾಯಕರಾದ ಶ್ರೀ ಅಶೋಕ್ ಹೆಬ್ಲಿ ಅವರು ಈ ಪ್ರಶಸ್ತಿಗೆ ಭಾಜನರಾದರು. ಅನಾರೋಗ್ಯದ ಕಾರಣದಿಂದ ದೂರದ ಗೋಕರ್ಣದಿಂದ ಶ್ರೀ ಹೆಬ್ಲಿ ಅವರು ಬರಲು ಸಾಧ್ಯವಾಗದ್ದರಿಂದ ಅವರ ಪರವಾಗಿ ಅದೇ ಕ್ಷೇತ್ರದಲ್ಲಿ ಶ್ರಮಿಸುತ್ತಿರುವ ಶ್ರೀಯುತ ಜಯರಾಮ ಅಡಿಗ ಅವರು ಪ್ರಶಸ್ತಿಯನ್ನು ಸ್ವೀಕರಿಸಿದರು.

ಇದೇ ಸಂದರ್ಭದಲ್ಲಿ ಶ್ರೀಮತಿ ವಸುಂಧರ ಅವರು ರಚಿಸಿರುವ 'ತಾಮ್ರ ಶಾಸನಗಳು ಮತ್ತು ತಾಳೆಗರಿ ಹಸ್ತಪ್ರತಿಗಳ ತೌಲನಿಕ ಅಧ್ಯಯನ' ಕೃತಿಯನ್ನು ಬಿಡುಗಡೆ ಮಾಡಲಾಯಿತು. ಹಿರಿಯ ವಿದ್ವಾಂಸರಾದ ಡಾ.ಕೆ.ಆರ್. ಗಣೇಶ್ ಅವರು ಮುಖ್ಯ ಅತಿಥಿಗಳಾಗಿ ಆಗಮಿಸಿ ಪ್ರಶಸ್ತಿ ಪ್ರದಾನ ಹಾಗು ಪುಸ್ತಕ ಬಿಡುಗಡೆ ಕಾರ್ಯಕ್ರಮ ನಡೆಸಿಕೊಟ್ಟರು. ತಮ್ಮ ಶಿಷ್ಯೆಯೂ ಆಗಿರುವ ವಸುಂಧರ ಅವರು ಬರೆದ ಕೃತಿಯ ಬಗ್ಗೆ ವಿಮರ್ಶಾತ್ಮಕವಾಗಿ ಮಾತನಾಡುತ್ತ ಪುಸ್ತಕ ರಚನೆಯಲ್ಲಿನ ದೋಷಗಳನ್ನು ಸರಿಪಡಿಸಿಕೊಂಡರೆ ಉತ್ತಮ ಪುಸ್ತಕವಾಗುತ್ತದೆ ಎಂಬ ಕಿವಿಮಾತನ್ನು ಹೇಳಿದರು. ಮರು ಮುದ್ರಣದಲ್ಲಿ ತಿದ್ದುಪಡಿ ಮಾಡಿ ಪ್ರಕಟಿಸಲು ಸಲಹೆ ನೀಡಿದರು.

ಹಸ್ತಪ್ರತಿಗಳು ಅದರ ಸಂರಕ್ಷಣೆ ಬಗ್ಗೆ ಹಿರಿಯ ವಿದ್ವಾಂಸರುಗಳ ಅಭಿಪ್ರಾಯಗಳನ್ನು ಬರೆದಿದ್ದರೆ ನಿರೂಪಣೆಯ ಸೊಗಸು ಹೆಚ್ಚುತಿತ್ತು. ಶಾಸ್ತ್ರ ವಿಷಯಗಳ ಬಗ್ಗೆ ಬರೆಯುವವರು ಕಡಿಮೆ ಇರುವ ಈ ಕಾಲದಲ್ಲಿ ತಾವು ಶಾಸನಶಾಸ್ತ್ರ ತರಗತಿಗಳಲ್ಲಿ ಅಭ್ಯಾಸ ಮಾಡಿದ ವಿಷಯ ಕುರಿತು ನೀಡಿರುವ ಮಾಹಿತಿ ಹಾಗು ಅಂಕಿ ಅಂಶಗಳು ಅಚ್ಚುಕಟ್ಟಾಗಿವೆ. ಈ ವಿಚಾರದಲ್ಲಿ ವಸುಂಧರ ಅವರಿಗೆ ಇರುವ ಶ್ರದ್ಧೆ–ಆಸಕ್ತಿ ಶ್ಲಾಘನೀಯ ಎಂದು ಗಣೇಶ್ ಹೇಳಿದರು.

ಲೇಖಕಿ ವಸುಂಧರ ಅವರು ಮಾತಾಡುತ್ತ ಗಣೇಶ್ ಸರ್ ಅವರು ಕೃತಿಯ ಬಗ್ಗೆ ನೇರವಾಗಿ ವಿಮರ್ಶೆ ಮಾಡಿದ್ದು ಇಷ್ಟವಾಯಿತು. ಲೇಖಕರ ಬೆಳವಣಿಗೆಗೆ ಇಂಥ ವಿಮರ್ಶೆ ಬೇಕು. ಅವರ ಮಾತನ್ನು ಶಿರಸಾವಹಿಸಿ ಸ್ವೀಕರಿಸುತ್ತೇನೆ ಎಂದು ಹೇಳಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಡಾ. ಬೈರಮಂಗಲ ರಾಮೇಗೌಡ ಅವರು "ಶಾಸನ, ಗ್ರಂಥಸಂಪಾದನೆ ಈ ವಿಷಯಗಳ ಬಗ್ಗೆ ಕೆಲಸ ಮಾಡುವವರು ಕಡಿಮೆಯಾದ ಈ ದಿನಗಳಲ್ಲಿ ವಸುಂಧರ ಅವರ ಪ್ರಯತ್ನ ಮೆಚ್ಚತಕ್ಕದ್ದು. ಅವರ ಅಧ್ಯಯನ, ಬರವಣಿಗೆ ಮುಂದುವರೆಯಲಿ" ಎಂದು ಹಾರೈಸಿದರು.

ಪ್ರತಿಷ್ಠಾನದ ಖಜಾಂಚಿಗಳಾದ ಶ್ರೀ ಚಂದ್ರಶೇಖರ ನಾದೂರು ಅವರು ನಿರೂಪಣೆ ಮಾಡಿ ಸಭೆಗೆ ವಂದಿಸಿದರು.

## ಸಾಹಿತ್ಯ–ಸಂಸ್ಕೃತಿ ಸಂವರ್ಧನೆ




ದಿನಾಂಕ ೨೪.೪.೨೦೨೫ರ ಗುರುವಾರದಂದು ಶ್ರೀ ಸಿ.ಕೆ. ನಾಗರಾಜರಾವ್, ಶ್ರೀ ಕೆ.ಪಿ.ರಾವ್, ಶ್ರೀ.ಕೊರಟಿ ಶ್ರೀನಿವಾಸರಾವ್ ದತ್ತಿ ಉಪನ್ಯಾಸ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. 'ಸಾಹಿತ್ಯ –ಸಂಸ್ಕೃತಿ ಸಂವರ್ಧನೆ ಮತ್ತು ಸಾಂಸ್ಕೃತಿಕ ಸಂಘಟನೆಗಳು' ಎಂಬ ವಿಷಯ ಕುರಿತು ಶೇಷಾದ್ರಿಪುರಂ ಕಾಲೇಜಿನ ಕನ್ನಡ ಉಪನ್ಯಾಸಕರಾದ ಡಾ.ರಾಮಲಿಂಗೇಶ್ವರ (ಸಿಸಿರಾ) ಅವರು ಮಾತನಾಡಿದರು.

ಕನ್ನಡ ಭಾಷೆ, ಸಂಸ್ಕೃತಿಯ ಉಳಿವಿಗೆ ಸಂಘ ಸಂಸ್ಥೆಗಳು ನೀಡಬೇಕಾದ ಕೊಡುಗೆಯ ಬಗ್ಗೆ ವಿವರಿಸಿದರು.

ಸಂಘ–ಸಂಸ್ಥೆಗಳಲ್ಲಿ ಕಾರ್ಯಕ್ರಮಗಳನ್ನು ಮಾಡುವಾಗ ಎದುರಿಸಬೇಕಾದ ಸಮಸ್ಯೆಗಳನ್ನು ಕುರಿತು ಮಾತಾಡಿದರು.

ಕನ್ನಡ ಭಾಷೆ–ಸಂಸ್ಕೃತಿ ಉಳಿಯಬೇಕಾದರೆ ಪ್ರಾಥಮಿಕ ಹಂತದಿಂದಲೇ ಮಕ್ಕಳು ಕಡ್ಡಾಯವಾಗಿ ಕನ್ನಡ ಕಲಿಯಬೇಕು.

ಕನ್ನಡ ಪತ್ರಿಕೆಗಳನ್ನು ಮನೆಗೆ ತರಿಸಬೇಕು. ತಮಿಳುನಾಡು, ಮಹಾರಾಷ್ಟ್ರ, ಕೇರಳ ರಾಜ್ಯಗಳಲ್ಲಿ ಅಲ್ಲಿನ ಭಾಷೆಗೆ ಜನರು ಕೊಡುವ ಮಹತ್ವವನ್ನು ನಮ್ಮ ಕನ್ನಡಿಗರು ಕೊಡುತ್ತಿಲ್ಲ ಎಂದು ವಿಷಾದಿಸಿದರು. ನಮ್ಮ ಜನಪದರು ಹೇಳುವ "ಬೆಳಗಾಗ ನಾನೆದ್ದು ಯರ‍್ಯಾರ ನೆನೆಯಾಲಿ ಎಳ್ಳು ಜೀರಿಗೆ ಬೆಳೆಯೋಳ, ಭೂಮ್ತಾಯ ಎದ್ದೊಂದು ಗಳಿಗೆ ನೆನೆದೇನಾ" ಎಂಬ ಗೀತೆಯನ್ನು ನೆನೆದು, ನಮ್ಮ ಜನಪದರು ಬದುಕಿಗೆ ಆಧಾರವಾದ ಭೂಮಿತಾಯಿಯನ್ನು ಹೇಗೆ ಸ್ಮರಿಸುತ್ತಾರೋ ಹಾಗೆ ನಮ್ಮ ಬದುಕಿಗೆ ಮೂಲವಾಗಿರುವ ಭಾಷೆ–ಸಂಸ್ಕೃತಿಯನ್ನು ಮರೆಯಬಾರದು ಎಂದು ಹೇಳಿದರು.

ಬಿ.ಎಂ.ಶ್ರೀ. ಪ್ರತಿಷ್ಠಾನದ ಹಸ್ತಪ್ರತಿ ವಿಭಾಗದ ಸಂಯೋಜಕರಾದ ಶ್ರೀ ಬಿ.ಎಸ್.ಗುರುಪ್ರಸಾದ್ ಅವರು ನಿರೂಪಣೆ ಹಾಗು ದತ್ತಿನಿಧಿ ಪರಿಚಯ ಮಾಡಿಕೊಟ್ಟು ಸ್ವಾಗತ ಮಾಡಿದರು.

ಮೊದಲಿಗೆ ಶ್ರೀ ಸಿ.ಕೆ.ನಾಗರಾಜರಾವ್, ಶ್ರೀ ಕೊರಟಿ ಶ್ರೀನಿವಾಸರಾವ್ ಅವರ ಭಾವಚಿತ್ರಗಳಿಗೆ ಪುಷ್ಪನಮನ ಸಲ್ಲಿಸಲಾಯಿತು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತಾಡಿದ ಡಾ.ಬೈರಮಂಗಲ ರಾಮೇಗೌಡ ಅವರು "ಇಂದು ಸಾಂಸ್ಕೃತಿಕ ಸಂಘ ಸಂಸ್ಥೆಗಳು ಯಾವ ನಿಟ್ಟಿನಲ್ಲಿ ಸಾಗುತ್ತಿವೆ ಎಂಬುದನ್ನು ಜನತೆ ಗಮನಿಸುತ್ತಿದೆ. ಸರ್ಕಾರದಿಂದ ಅನುದಾನ ಪಡೆದು ದೊಡ್ಡ ಸಾಂಸ್ಕೃತಿಕ ಸಂಘ ಸಂಸ್ಥೆಗಳು ಜನ ಮತ್ತು ಸಮಾಜ ಬಯಸುವ ಸಾರ್ಥಕ ಕಾರ್ಯಕ್ರಮಗಳನ್ನು ಮಾಡಬೇಕು.

ಶೇಷಾದ್ರಿಪುರ ಕಾಲೇಜಿನಲ್ಲಿ ಉಪನ್ಯಾಸಕರಾಗಿರುವ ಸಿಸಿರಾ ಅವರು ಬುದ್ಧ–ಬಸವ–ಗಾಂಧಿ ಟ್ರಸ್ಟ್ ಮೂಲಕ, ಗೆಳೆಯರ ಬಳಗದ ಬಲದಿಂದ ಕನ್ನಡದ ಕೆಲಸವನ್ನು ಪ್ರೀತಿಯಿಂದ ಮಾಡುತ್ತಿದ್ದಾರೆ. ಹಾಗಿರುವಾಗ ದೊಡ್ಡ ದೊಡ್ಡ ಸಂಸ್ಥೆಗಳ ಜವಾಬ್ದಾರಿ ಹೆಚ್ಚಿನದು" ಎಂದು ಹೇಳಿ ಸಿಸಿರಾ ಅವರ ಕಾರ್ಯವೈಖರಿಯನ್ನು ಶ್ಲಾಘಿಸಿದರು.

ಶ್ರೀ ಗುರುಪ್ರಸಾದ್ ಅವರ ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

## ಪ್ರಸ್ತುತ ತಿಂಗಳ ಅಂಗಳ

**೭.೦೫.೨೦೨೫ ಬುಧವಾರ ಸಂಜೆ ೫.೦೦ ಗಂಟೆಗೆ**

ಕ.ವೆಂ.ರಾಘವಾಚಾರ್, ಡಿ.ವಿ.ಗುಂಡಪ್ಪ, ಬಿ.ಎಸ್. ಸಣ್ಣಯ್ಯ, ಡಾ.ಎಂ.ಎಲ್. ಲಲಿತಮ್ಮ ದತ್ತಿ

ವಿಚಾರ ಮಂಡನೆ : ಡಾ. ಪಿ. ನಂಜುಂಡ,

ಸಹಾಯಕ ಪ್ರಾಧ್ಯಾಪಕರು, ಸರ್ಕಾರಿ ಕಲಾ ಕಾಲೇಜು

ವಿಷಯ: ಡಿ.ವಿ. ಗುಂಡಪ್ಪ ಅವರ 'ಜ್ಞಾಪಕ ಚಿತ್ರಶಾಲೆ'

**೯.೦೫.೨೦೨೫ ಶುಕ್ರವಾರ ಸಂಜೆ ೫.೦೦ ಗಂಟೆಗೆ**

ಡಾ. ಎಂ. ಚಿದಾನಂದಮೂರ್ತಿ ಅವರ ಜನ್ಮದಿನದ ಪ್ರಯುಕ್ತ ದತ್ತಿ ಉಪನ್ಯಾಸ

ವಿಚಾರ ಮಂಡನೆ : ಡಾ. ಚಿತ್ತಯ್ಯ ಪೂಜಾರ್

ವಿಷಯ: ಕನ್ನಡ ಸಂಶೋಧನೆ ಮತ್ತು ಎಂ. ಚಿದಾನಂದಮೂರ್ತಿ

**೧೧.೦೫.೨೦೨೫ ಭಾನುವಾರ ಬೆಳಗ್ಗೆ ೧೦.೩೦ ಗಂಟೆಗೆ**

ನಾದಯೋಗಿ ಶ್ರೀ ಭೈರವಿ ಕೆಂಪೇಗೌಡ ದತ್ತಿಯ ಆಶ್ರಯದಲ್ಲಿ ಭೈರವಿ ರಾಗದ ಗಾಯನ ಸ್ಪರ್ಧೆ

(ಉತ್ತರಾದಿ ಅಥವಾ ದಕ್ಷಿಣಾದಿ)

(೧೫ ರಿಂದ ೨೦ರ ವಯೋಮಾನದ ಯುವಕ ಯುವತಿಯರಿಗೆ)

**೨೦.೦೫.೨೦೨೫ ಮಂಗಳವಾರ ಸಂಜೆ ೫.೦೦ ಗಂಟೆಗೆ**

ಶ್ರೀಮತಿ ಸುಬ್ಬರತ್ನಮ್ಮ ಶ್ರೀ ಆರ್.ಕೆ.ಚಂದ್ರಶೇಖರ ಗುಪ್ತ ಸ್ಮಾರಕದತ್ತಿ, ಶ್ರೀಮತಿ ಮುದ್ದಮ್ಮ ಶ್ರೀ ಆರ್.ಸಿ. ಕೃಷ್ಣಶೆಟ್ಟಿ ಸ್ಮಾರಕ ದತ್ತಿ ಹಾಗೂ ಶ್ರೀಮತಿ ಸುಜಾತ ಶ್ರೀಧರಮೂರ್ತಿ ದತ್ತಿಗಳ ಸಂಯುಕ್ತ ಆಶ್ರಯದಲ್ಲಿ ಅತ್ಯುತ್ತಮ ಪ್ರವಾಸ ಸಾಹಿತ್ಯ ಬಹುಮಾನ ಮತ್ತು ಅತ್ಯುತ್ತಮ ಸಂಶೋಧನಾ ವಿದ್ಯಾರ್ಥಿ ಬಹುಮಾನ ವಿತರಣಾ ಸಮಾರಂಭ

**೨೭.೦೫.೨೦೨೫ ಮಂಗಳವಾರ ಸಂಜೆ ೫.೦೦ ಗಂಟೆಗೆ**

ವೈಯಾಕರಣಿ ಗರಣಿ ಕೃಷ್ಣಾಚಾರ್ಯ ದತ್ತಿ

ವಿಚಾರ ಮಂಡನೆ : ಡಾ. ಸುರೇಶ್ ನಾಗಲಮಡಿಕೆ

ವಿಷಯ: ಕಾವ್ಯ ಮೀಮಾಂಸೆ – ಬೇಂದ್ರೆ ದೃಷ್ಟಿ



# ಬಿ.ಎಂ.ಶ್ರೀಕಂಠಯ್ಯ

## ೭. ಕನ್ನಡ ಸಾಹಿತ್ಯದ ಚರಿತ್ರೆ

ಮುಂದುವರೆದ ಭಾಗ...

**ಡಾ. ರಾಮೇಗೌಡ (ರಾಗೌ)**

ಶ್ರೀಕಂಠಯ್ಯನವರು ಸೃಜನಶೀಲ ಬರೆವಣಿಗೆಯಲ್ಲಿ ನಿರತರಾಗಿದ್ದಂತೆ, ಸೃಜನೇತರ ರಚನೆಯಲ್ಲಿಯೂ ತಮ್ಮನ್ನು ತೊಡಗಿಸಿಕೊಂಡಿದ್ದರು. ಕನ್ನಡ ಸಾಹಿತ್ಯದ ಅಭ್ಯಾಸಕ್ಕೆ ಆಧಾರ ಗ್ರಂಥಗಳೂ ಪರಾಮರ್ಶನ ಕೃತಿಗಳೂ ಆ ಕಾಲಕ್ಕೆ ತುಂಬ ಅಗತ್ಯವಾಗಿದ್ದವು. ಇದನ್ನು ಮನಗಂಡಿದ್ದ ಶ್ರೀಯವರು ಅಂತಹ ಬರೆವಣಿಗೆಯಲ್ಲಿ ಆಸ್ಥೆ ವಹಿಸಿದಂತೆ ತೋರುವುದು. 'ಕನ್ನಡ ಕೈಪಿಡಿ'ಯ ಎರಡನೆಯ ಭಾಗವಾಗಿ ಪ್ರಕಟವಾದ ಅವರ 'ಕನ್ನಡ ಸಾಹಿತ್ಯದ ಚರಿತ್ರೆ' ಅಂತಹ ಕೃತಿಗಳಲ್ಲಿ ಒಂದು. ೧೯೪೭ರಷ್ಟು ಹಿಂದೆಯೇ ಪ್ರಕಟವಾದ ಈ ಕೃತಿ ಅಲ್ಲಿಂದ ಹಲವಾರು ಮುದ್ರಣಗಳನ್ನು ಕಂಡಿದೆ; ಉಪಯುಕ್ತವಾಗಿದೆ, ಸಾಹಿತ್ಯದ ಲಕ್ಷಣ, ಕವಿಗಳ ಚರಿತ್ರೆ ಮತ್ತು ಕಾಲ, ಸಾಹಿತ್ಯದ ವಿಭಾಗ ಕ್ರಮದಂತಹ ವಿಷಯಗಳನ್ನು ಮೊದಲು ಪ್ರಸ್ತಾಪಿಸಿದವರು. ಆಮೇಲೆ ಆರಂಭಕಾಲದಿಂದ ನಾಗಚಂದ್ರನವರೆಗಿನ ಕವಿಗಳ ಕಾವ್ಯಗಳ ವಿಶ್ಲೇಷಣೆ ಮಾಡಿದ್ದಾರೆ. ಕನ್ನಡ ಸಾಹಿತ್ಯ ಚರಿತ್ರೆಯನ್ನು ಅವರು ಪೂರ್ಣಗೊಳಿಸದೇ ಹೋದುದು ಕೊರತೆಯೆನಿಸುತ್ತದೆ. ಅಷ್ಟು ಹೊತ್ತಿಗೆ ಅವರು ತೀರಿಕೊಂಡಿದ್ದರಿಂದ ಇದು ಅಪೂರ್ಣವಾಗಿಯೇ ಉಳಿಯಿತು.

ಆ ಕಾಲದಲ್ಲಿ ಸಾಹಿತ್ಯ ಚರಿತ್ರೆಯನ್ನು ಬರೆಯಲು ಸಾಮಗ್ರಿಯ ಅಭಾವವಿತ್ತು. ಮೂಲ ಕಾವ್ಯಗಳು ಸಂಪಾದಿತವಾಗಿ ಪ್ರಕಟವಾಗಿದ್ದವು ಕಡಿಮೆ. ಆ ಕಾರ್ಯಕ್ಕಾಗಿ ಹಲವಾರು ಮಹನೀಯರು ದುಡಿಯುತ್ತಿದ್ದುದನ್ನು ಅವರು ಬಲ್ಲವರಾಗಿದ್ದರು. ಪ್ರಕಟವಾಗಿದ್ದ ಕಾವ್ಯಗಳನ್ನೇ ಆಧರಿಸಿ ಸಾಹಿತ್ಯ ಚರಿತ್ರೆಯನ್ನು ಅಭ್ಯಾಸಿಗಳ ಉಪಯೋಗಕ್ಕಾಗಿ ಸಿದ್ಧಪಡಿಸುವುದು ಅವರಿಗೆ ಅನಿವಾರ್ಯವಾಗಿತ್ತು. ಏನು ಮಾಡಿದರೂ ಕೊರತೆಗಳು ಇರುತ್ತಿದ್ದುವು; ಆದರೂ ಅಂತಹ ಕೆಲಸಗಳು ಪ್ರಥಮ ಸಾಹಸವಾಗಿದ್ದುವು. ಅಂತಹ ಸಾಹಸದಲ್ಲಿ 'ಶ್ರೀ' ಯವರ 'ಕನ್ನಡ ಸಾಹಿತ್ಯದ ಚರಿತ್ರೆ' ಯೂ ಒಂದು. ಅವರು ಈ ವಿಷಯಗಳನ್ನು ಕುರಿತು ಪೀಠಿಕಾಭಾಗದಲ್ಲಿ ಹೀಗೆಂದು ಪ್ರಸ್ತಾಪಿಸಿದ್ದಾರೆ : 'ಕನ್ನಡ ಸಾಹಿತ್ಯದ ಚರಿತ್ರೆಯನ್ನು ನಿಸ್ಸಂದೇಹವಾಗಿಯೂ, ಎಲ್ಲಾ ಭಾಗಗಳಲ್ಲಿ ಸಂಪೂರ್ಣವಾಗಿಯೂ ಬರೆಯಲು ಇನ್ನೂ ಸಾಧ್ಯವಿಲ್ಲ. ಗ್ರಂಥಗಳನ್ನು ಕಂಡುಹಿಡಿಯುವುದು, ಶೋಧನೆ ಮಾಡಿ ಮುದ್ರಿಸುವುದು, ಕಾಲವನ್ನು ನಿರ್ಣಯ ಮಾಡುವುದು, ಗುಣದೋಷಗಳನ್ನು ವಿಮರ್ಶಿಸುವುದು ಇವೇ ಮುಂತಾದ ಸಾಹಿತ್ಯ ಚರಿತ್ರೆಗೆ ಸಹಕಾರಿಗಳಾದ ಕಾರ್ಯಗಳು ಇನ್ನೂ ಪೂರ್ತಿಯಾದುವೆಂದು ಹೇಳುವ ಹಾಗಿಲ್ಲ.' ಆರಂಭದಲ್ಲಿ ಕೆಲಸ ಮಾಡುವವರಿಗೆ ಇಂತೆಲ್ಲಾ ಸವಾಲುಗಳು ಇರುವುದು ಸಹಜ; ಅವನ್ನೆಲ್ಲ ಸರಿದೂಗಿಸಿಕೊಂಡು ಸಾಧನೆ ಮಾಡುವುದು ವಿಶೇಷ. 'ಶ್ರೀ'ಯವರದು ಆರಂಭಿಕ ಸಾಧನೆ ಎಂಬುದನ್ನು ಮರೆಯಲಾಗದು.

ಸಾಹಿತ್ಯದ ಚರಿತ್ರೆಗೆ ಸಂಬಂಧಿಸಿದಂತೆ ವಿದೇಶೀ ವಿದ್ವಾಂಸರಾದ ಕಿಟ್ಟೆಲ್, ಲ್ಯೂಯಿಸ್ ರೈಸ್, ಇ.ಪಿ. ರೈಸ್ ಮತ್ತು ದೇಶೀಯ ವಿದ್ವಾಂಸರಾದ ಎಸ್.ಜಿ. ನರಸಿಂಹಾಚಾರ್ಯ ಹಾಗೂ ಆರ್. ನರಸಿಂಹಾಚಾರ್ಯರು ಅಮೂಲ್ಯವಾದ ಕೆಲಸ ಮಾಡಿದ್ದನ್ನು ಈ ಸಮಯದಲ್ಲಿ ಶ್ರೀಯವರು ನೆನೆಯುತ್ತಾರೆ. ಇಂಥವರ ಸಹಾಯದ ಹಿನ್ನೆಲೆಯಲ್ಲಿ 'ಈ ಸಣ್ಣ ಪುಸ್ತಕವನ್ನು' ಬರೆಯಲಾಗಿದೆ ಎಂಬುದು ಅವರ ನಮ್ರ ಮಾತು. ಎಲ್ಲ ಕವಿಗಳನ್ನು ಕುರಿತೂ ಬರೆಯಲಾಗಲಿಲ್ಲ ಎಂಬುದನ್ನು ಬಿಟ್ಟರೆ, ಅವರು ಹೇಳಿಕೊಂಡಿರುವಂತೆ ಇದು ಸಣ್ಣ ಪ್ರಯತ್ನವೇನೂ ಅಲ್ಲ. 'ವಿದ್ಯಾರ್ಥಿಗಳ ಪ್ರಥಮ ಪರಿಚಯಕ್ಕಾಗಿ' ಇದನ್ನು ಬರೆಯಲಾಯಿತೆಂದೂ ಅವರು ಹೇಳಿಕೊಳ್ಳುತ್ತಾರೆ; ವಿದ್ವಾಂಸರ ಪರಿಶೀಲನೆಗೂ ಇದು ಬರುತ್ತದೆ ಎಂಬುದರಲ್ಲಿ ಸಂದೇಹವಿಲ್ಲ. ಕನ್ನಡ ಭಾಷೆ ಮತ್ತು ಸಾಹಿತ್ಯದ ಬೆಳವಣಿಗೆಯ ದೃಷ್ಟಿಯಿಂದ ಇಂತಹ ಯಾವೊತ್ತೂ ಕಾರ್ಯವನ್ನು ಅವರು ಕೈಗೊಳ್ಳುತ್ತಾ ಬಂದಿರುವುದನ್ನು ಸಹೃದಯರು ಬಲ್ಲವರಾಗಿದ್ದಾರೆ.

ಆರಂಭದಲ್ಲಿ 'ಸಾಹಿತ್ಯದ ಲಕ್ಷಣ'ಕ್ಕೆ ಅವರು ನೀಡಿದ ವ್ಯಾಖ್ಯೆ ಕುತೂಹಲಕಾರಿಯಾಗಿದೆ. ಅವರ ಒಲವೆಲ್ಲ ರಸಾಸ್ವಾದನ ಮತ್ತು ಸೌಂದರ್ಯಾನುಭವದ ಕಡೆಗೆ. ಜ್ಞಾನಪ್ರಸಾರ ಮತ್ತು ಪಾಂಡಿತ್ಯ ಪ್ರದರ್ಶನದ ಗ್ರಂಥಗಳಿಗಿಂತ ಇಂತಹ ಕೃತಿಗಳು ಮುಖ್ಯ ಎಂಬುದು ಅವರ ವಾದ. ಇಂತಹ ಕವಿಗಳು ಮಹಾಕವಿಗಳೇ ಆಗಿರಬೇಕಾದ ಅವಶ್ಯಕತೆಯಿಲ್ಲವೆಂದು ಅವರು ತರ್ಕಿಸುತ್ತಾರೆ. ಅವರು ಇಂತಹ ವಿಷಯದಲ್ಲಿ ಮಧ್ಯಮ ಮಾರ್ಗಿ, ಅದಕ್ಕಾಗಿಯೇ ಈ ಸೂತ್ರ : "ಕವಿ ನಿಜವಾಗಿಯೂ ಕವಿಯಾಗಿದ್ದರೆ ಸರಿ; ಕಾವ್ಯ ನಿಜವಾಗಿಯೂ ಕಾವ್ಯ ಜಾತಿಗೆ ಸೇರಿದ್ದರೆ ಸಾಕು." ಈ ಸೂತ್ರವನ್ನು ಆಧಾರವಾಗಿಟ್ಟುಕೊಂಡು ಅವರು ತಮ್ಮ ಸಾಹಿತ್ಯ ಚರಿತ್ರೆಯನ್ನು ರಚಿಸಿರುವಂತೆ ತೋರುವುದು. ಸಾಮಾನ್ಯ ಓದುಗನ ದೃಷ್ಟಿಯನ್ನೇ ಅವರಿಲ್ಲಿ ಇರಿಸಿಕೊಂಡಿದ್ದಾರೆ.

ಕನ್ನಡ ಕವಿಗಳ ಜೀವನ ಕಾಲವಿಚಾರವಾಗಿ ದೊರೆಯುವ ಆಧಾರಗಳು ಬಹಳ ಕಡಿಮೆ ಎಂಬುದು ಅವರಿಗೆ ತಿಳಿಯದ ವಿಷಯವೇನೂ ಆಗಿರಲಿಲ್ಲ. ಆ ಕಾಲದಲ್ಲಿ ಹೆಚ್ಚಿನ ಸಂಶೋಧನೆಗಳೂ ಆಗಿರಲಿಲ್ಲ. ಇಂತಹ ಸಂದರ್ಭದಲ್ಲಿ ಒಳ ಮತ್ತು ಹೊರಗಿನ ಆಧಾರಗಳನ್ನು ಕ್ರೋಡೀಕರಿಸಿ ಕೊಡುವ ಕೆಲಸ ನಡೆಯಬೇಕಾಗಿತ್ತು. ಇದನ್ನು ಗಮನಿಸಿದ ಶ್ರೀಯವರು ಕವಿಗಳ ಕಾಲಾದಿವಿಚಾರಗಳ ಸಾಧನಗಳನ್ನು ಕುರಿತು ಬರೆಯುವುದು ಅನಿವಾರ್ಯವಾಗಿತ್ತು. ಆ ಪ್ರಕಾರ ಆರು ವಿಧದ ಸಾಧನಗಳನ್ನು ಕೆಲಮಟ್ಟಿನ ನಿದರ್ಶನಗಳ ಮೂಲಕ ಸೂಚಿಸಿದ್ದಾರೆ. ಅವರು ಪಟ್ಟಿ ಮಾಡಿರುವ ಸಾಧನಗಳು ಇವು: ೧. ಗ್ರಂಥ ಸಮಾಪ್ತಿಯ ಉಲ್ಲೇಖಗಳು, ೨. ಶಾಸನಗಳು, ೩. ಪೂರ್ವಕವಿಗಳ ಸ್ಮರಣೆ, ೪. ಉದ್ಧರಣ ಅನುಕರಣಗಳು, ೫. ಐತಿಹ್ಯಗಳು, ೬. ಮತ, ವಿಷಯ, ರೂಪ, ಶೈಲಿಗಳು. ಇವುಗಳಲ್ಲಿ ಐತಿಹ್ಯಗಳ ಮೇಲೆ ಹೆಚ್ಚು ಅವಲಂಬಿಸುವುದು ಸರಿಯಲ್ಲವೆಂದೇ ತೋರುವುದು. ಇನ್ನು ಆರನೆಯದು ಅಂತಹ ಬಲವಾದ ಆಧಾರವಲ್ಲವೆಂದು ಅವರೇ ಹೇಳಿದ್ದಾರೆ. ಈ ಸಾಧನಗಳ ಚರ್ಚೆಗೆ, ಅವುಗಳ ಫಲಾಫಲ ನಿರ್ಣಯಕ್ಕೆ ಶ್ರೀಯುವರು ಹೋದಂತಿಲ್ಲ.

ಸಾಹಿತ್ಯ ಚರಿತ್ರೆಯಲ್ಲಿ ವಿಭಾಗಕ್ರಮ ಒಂದು ಮುಖ್ಯವಾದ ವಿಷಯ. ಕನ್ನಡ ಸಾಹಿತ್ಯವನ್ನು ಅವರು 'ಕಾಲಾನುಸಾರಿ' ಮತ್ತು 'ಮತಾನುಸಾರಿ' ಎಂದು ಎರಡು ಬಗೆಯಾಗಿ ವಿಭಜಿಸಿಕೊಳ್ಳುತ್ತಾರೆ. ಭಾಷೆಯ ಅವಸ್ಥೆ, ಕಾವ್ಯದ ರೂಪ, ರಾಜವಂಶ, ಪ್ರಧಾನಕವಿ ಇವುಗಳ ಆಧಾರದ ಮೇಲೆ ಮಾಡುವ ಮೊದಲ ವಿಭಾಗ ಕ್ರಮ 'ಅಷ್ಟು ಔಚಿತ್ಯ'ವಲ್ಲವೆಂದು ಅವರೇ ಹೇಳಿರುವುದರಿಂದ ಮುಂದುವರಿಸುವ ಅಗತ್ಯವಿಲ್ಲ; ಆದರೆ ಮುಂದೆ ಕೆಲವರು ಪ್ರಧಾನ ಕವಿಯ ಹೆಸರಿನ ಮೇಲೆ ವಿಭಾಗ ಮಾಡಿರುವುದಿದೆ. ಮತ ಪ್ರಾಬಲ್ಯವನ್ನು ಗಮದಲ್ಲಿರಿಸಿಕೊಂಡು ಜೈನ, ವೀರಶೈವ ಮತ್ತು

ವೈದಿಕ ಎಂದು ವಿಭಜಿಸಿಕೊಳ್ಳುವುದು ಆಗ ಹೆಚ್ಚು ಪ್ರಚಾರದಲ್ಲಿದ್ದ ಕ್ರಮವಾದರೂ, ಆಧುನಿಕ ಮನಸ್ಸು ಒಪ್ಪಲಾರದೆಂದೇ ತೋರುವುದು. ನವೀನಕಾಲವೊಂದನ್ನು ಇದರೊಡನೆ ಸೇರಿಸಿ ವಿವರಿಸುವಾಗ ಲೇಖಕರೇ "ಮತ ಸಂಬಂಧವಾದ ವಿಷಯಗಳು ಈಗ ಅಷ್ಟು ಪ್ರಧಾನವಲ್ಲ; ಅವುಗಳಲ್ಲಿ ಸಾಹಿತ್ಯಾಸಕ್ತರಿಗೆ ಅಷ್ಟು ವಿಶ್ವಾಸವಿಲ್ಲವೆಂದೇ ಹೇಳಬಹುದು" ಎಂದು ಅಭಿಪ್ರಾಯಪಟ್ಟಿರುವುದು ಒಪ್ಪತಕ್ಕದ್ದೇ ಆಗಿದೆ; ಮೇಲಿನ ಮಾತಿಗೆ ಪೂರಕವಾದದ್ದಾಗಿದೆ. ಒಟ್ಟಾರೆ ಶ್ರೀಯವರು ಆರಂಭಕಾಲ, ಮತಪ್ರಾಬಲ್ಯಕಾಲ ಮತ್ತು ನವೀನ ಕಾಲ ಎಂಬುದಾಗಿ ಮೂರು ರೀತಿಯ ವಿಭಾಗ ಕ್ರಮವನ್ನು ಸೂಚಿಸುತ್ತಾರೆ; ಕೆಲಕಾಲ ಅದು ಒಪ್ಪಿತ ಸೂತ್ರವೇ ಆಗಿತ್ತು. ಮೊದಲನೆಯದು ಮತ್ತು ಕೊನೆಯದನ್ನು ಯಾವುದೇ ಚರ್ಚೆಯಿಲ್ಲದೆ ಸ್ವೀಕರಿಸಬಹುದಾದರೂ, ಮತಾನುಸರಣೆಯ ವಿಭಜನೆಕ್ರಮ ಅಷ್ಟೇನು ಉತ್ತಮದ್ದಲ್ಲ. ಪ್ರಾಚೀನ ಸಾಹಿತ್ಯದಲ್ಲಿ ಮತಧರ್ಮದ ಅಭಿನಿವೇಶವಿದ್ದರೂ, ಅಂತಿಮವಾಗಿ ಸಾಹಿತ್ಯ ಕಲೆ ವಿಜೃಂಭಿಸುವಂತಿರಬೇಕು; ಅಂಥದೊಂದು ಕ್ರಮ ಯಾವಾಗಲೂ ಅಗತ್ಯ.

ಬಿ.ಎಂ.ಶ್ರೀ. ಅವರ 'ಸಾಹಿತ್ಯ ಚರಿತ್ರೆ' ಜೈನ ಕವಿಗಳಿಗೆ ಮಾತ್ರ ಸೀಮಿತವಾಗಿದೆ. ಕನ್ನಡ ಸಾಹಿತ್ಯವನ್ನು 'ಮೊದಲು ಉತ್ತಮ ದಶೆಗೆ' ತಂದವರು ಎಂಬ ಅವರ ಮಾತು ಸರಿಯಾಗಿದೆ. ಜೈನ ಕವಿಗಳನ್ನು ಅವರು ರಾಜವಂಶಗಳ ಪ್ರಕಾರ ವಿಂಗಡಿಸಿದ್ದು ಸರಿಯಲ್ಲ. ಇಲ್ಲಿ ಎಲ್ಲರೂ ರಾಜಾಶ್ರಯದಲ್ಲಿದ್ದರೆಂದು ತೆಗೆದುಕೊಳ್ಳಬೇಕಾದ್ದಿಲ್ಲ. ರಾಜಾಶ್ರಯ ಪ್ರಾಚೀನ ಸಾಹಿತ್ಯದಲ್ಲಿ ಒಂದು ಪ್ರಧಾನ ಪ್ರವೃತ್ತಿಯಾಗಿತ್ತೆಂಬುದು ಸ್ಪಷ್ಟ; ಅಂದಮಾತ್ರಕ್ಕೆ ವಿಭಜನೆ ಆ ಪ್ರಕಾರವಾಗಿಯೇ ಇರಬೇಕಾದ್ದಿಲ್ಲ. ಈ ವಿಷಯದಲ್ಲಿ ಬಿ.ಎಂ.ಶ್ರೀ.ಯವರು ಪ್ರಭುತ್ವವಾದಿ ಲೇಖಕರೆಂದು ತೋರುತ್ತದೆ. ಸಹಜವಾಗಿಯೇ ಪಂಪನನ್ನು ಕುರಿತು ವಿಸ್ತಾರವಾಗಿ ಪ್ರಸ್ತಾಪಿಸಿರುವರು. ಪಂಪನ 'ಆದಿಪುರಾಣ'ವನ್ನು ಕುರಿತು ಈ ಮಾತಿದೆ: "ಪಂಪನ ಧರ್ಮಶ್ರದ್ಧೆಯಿಂದಲೂ ಭಕ್ತಿ ಜ್ಞಾನ ವೈರಾಗ್ಯ ಭಾವಗಳಿಂದಲೂ ಕವಿತಾವೇಶದ ಪ್ರಥಮ ಸ್ಫೂರ್ತಿಯಿಂದಲೂ ಪ್ರಜ್ವಲಿಸುವ ಈ ಕಾವ್ಯವು ಕಡೆಗೆ ಆತನ ಭಾರತಕ್ಕೆ ಒಂದು ಕೈ ಮೇಲೆಂದು ಹೇಳಿದರೂ ಹೇಳಬಹುದಾಗಿದೆ." ಈ ಹೇಳಿಕೆ ಪ್ರಕಾರ 'ಧರ್ಮಶ್ರದ್ಧೆ'ಯಿಂದ ಯಾವ ಕಾವ್ಯವೂ ದೊಡ್ಡದಾಗುವುದಿಲ್ಲ; 'ಆದಿಪುರಾಣ' ಕೂಡ. ಆದಿಪುರಾಣ ಧಾರ್ಮಿಕ ಕಾವ್ಯವೇನೋ ನಿಜ; ಆದರೆ ಭಕ್ತಿ ಕಾವ್ಯವಲ್ಲ. ಜ್ಞಾನ, ವೈರಾಗ್ಯ, ಕವಿತಾವೇಶ ಇವುಗಳಿಂದ ಆದಿಪುರಾಣ ದೊಡ್ಡದಾಗಿದೆ ಎಂಬುದರಲ್ಲಿ ಸಂಶಯವಿಲ್ಲ; ಆದರೆ ಇವುಗಳಿಂದಲೇ ಅವನದೇ ಆದ ಭಾರತ ಕಾವ್ಯವನ್ನು ಇದು ಮೀರಿಸಿದೆಯೇ ಎಂಬುದು ಪ್ರಶ್ನೆ. ಭವ್ಯತೆಯಿಂದ ಮಾತ್ರ ತುಸು ಸಾಧ್ಯವಾಗಿದೆ. ಎಂಬ ಕುವೆಂಪು ಅವರ ಮಾತನ್ನು ('ಪಂಪನಲ್ಲಿ ಭವ್ಯತೆ') ಇಲ್ಲಿ ಅಗತ್ಯವಾಗಿ ಉಲ್ಲೇಖಿಸಬೇಕು.

ಪಂಪ ಕವಿ ತನ್ನ ಕಾವ್ಯಗಳನ್ನು ಧಾರ್ಮಿಕ ಮತ್ತು ಲೌಕಿಕ ಎಂದು ವಿಭಜಿಸಿಕೊಂಡು ಬರೆದದ್ದು ಒಂದು ಪ್ರಸಿದ್ಧ ವಿಷಯ. ಇದು ಆಶ್ರಯದಾತನನ್ನು ಹೋಲಿಸಿಕೊಂಡು ಬರೆಯಲಿಕ್ಕೆ ಮಾಡಿಕೊಂಡ ಏರ್ಪಾಡು ಎನ್ನುವುದು ಸಾಮಾನ್ಯವಾಗಿ ಹೇಳುವ ಅಭಿಪ್ರಾಯ. ಇದಕ್ಕೆ ಶ್ರೀಕಂಠಯ್ಯನವರು ಬೇರೆಯದೇ ಕಾರಣವನ್ನು ಹುಡುಕಿಕೊಂಡಿದ್ದಾರೆ: "ತನ್ನ ಜೈನಶ್ರದ್ಧೆಗೂ ತನ್ನ ಪೂರ್ವಿಕರ ವೈದಿಕ ಸಂಸ್ಕಾರಕ್ಕೂ ಹೋರಾಟ ಹುಟ್ಟಿ, ಒಳಗೆಯೇ ಪಂಪನ ಮನಸ್ಸು ಎರಡು ಕವಲಾಗಿ ಒಡೆದು, ಆತನ ಕವಿದೃಷ್ಟಿಯನ್ನು ಆತನ ಉತ್ಸಾಹ ಧ್ವನಿಯನ್ನೂ ಸ್ವಲ್ಪಮಟ್ಟಿಗೆ ಕುಗ್ಗಿಸಿತೆಂದು ಹೇಳಬೇಕಾದ ನಿರ್ಬಂಧ ಒದಗಿದೆ". ಇದು ಸರಿಯಾದ ವಿಶ್ಲೇಷಣೆಯಲ್ಲ. ಜೈನ ಮತ್ತು ವೈದಿಕ ಮನಸ್ಸುಗಳು ಬೇರೆ ಬೇರೆ ಎಂದು ಒಪ್ಪಿದರೂ, ಜೈನ ಧಾರ್ಮಿಕವಾಗಿ, ವೈದಿಕ ಲೌಕಿಕವಾದುದಾದರೂ ಹೇಗೆ? 'ವಿಕ್ರಮಾರ್ಜುನ ವಿಜಯ'ದ ಕಥೆ ಮೂಲದಲ್ಲಿ ವೈದಿಕವಾದುದಾಗಿರಬೇಕು; ಆದರೆ ಸ್ವರೂಪದಲ್ಲಿ ಧಾರ್ಮಿಕವಾದುದಲ್ಲ. ಅದು ಮುಖ್ಯವಾಗಿ ಲೌಕಿಕ ಕಥೆ, ಆ ಕಾರಣವಾಗಿ ಆಶ್ರಯದಾತನ ಹೋಲಿಕೆ. ಇನ್ನೂ ಮುಂದೆ ಹೋಗಿ ಹೇಳುವುದಾದರೆ, ತನ್ನ ಸೃಜನಶೀಲ ಪ್ರತಿಭೆಯನ್ನು 'ಧರ್ಮದ' ಹಿಡಿತದಿಂದ ಪಾರುಮಾಡುವುದಕ್ಕಾಗಿಯೇ ಈ ಕವಲುಗಳಿಗೆ ಅವನು ಆಸ್ಪದ ಕೊಟ್ಟಿರಬಹುದು. ಆದ್ದರಿಂದ, ಇದು ಜೈನ–ವೈದಿಕ ಸಂಸ್ಕಾರಕ್ಕೆ ಸಂಬಂಧಿಸಿದ ವಿಷಯವಲ್ಲವೆಂದು ತೋರುವುದು; ಈ ದೃಷ್ಟಿಯಲ್ಲಿ ಶ್ರೀಯವರ ನಿಲುವು ಸರಿಯಾದುದಲ್ಲವೆಂದೇ ಹೇಳಬೇಕು.

ಪೊನ್ನನ 'ಶಾಂತಿಪುರಾಣ'ದ ಬಗ್ಗೆ ಬರೆಯುತ್ತಾ 'ಕಾಳಿದಾಸನಿಗೆ ನೂರ್ಮಡಿ ಎಂದಮೇಲೆ ಮತ್ತೇನು ಹೇಳುವುದಿದೆ? ಸಂಸ್ಕೃತದೊಡನೆ ಕನ್ನಡದ ಮೇಲಾಟವನ್ನು ಈ ಕಾಲದ ಕವಿಗಳು ಕೈಗೊಂಡ ಧೀರತನವನ್ನು ಇದು ಸೂಚಿಸುತ್ತದೆ' ಎಂದಿದ್ದಾರೆ. ಇದನ್ನು ಒಪ್ಪಿಕೊಳ್ಳುವುದಾದರೆ, "ವ್ಯಾಸ ಮುನೀಂದ್ರ ರುಂದ್ರ ವಚನಾಮೃತವಾರ್ಧಿಯನೀಸುವೆಂ ಕವಿ ವ್ಯಾಸನೆನೆಂಬ ಗರ್ವಮೆನಗಿಲ್ಲ" ಎಂಬ ಪಂಪನ ಮಾತಿಗೆ ಏನು ಹೇಳುವುದು? ಆದ್ದರಿಂದ ಇದು 'ಸಂಸ್ಕೃತದೊಡನೆ ಕನ್ನಡದ ಮೇಲಾಟ'ವನ್ನು ತೋರಿಸುವುದಿಲ್ಲ. ಕಾಳಿದಾಸನನ್ನು ಮೀರಿಸುವುದಿರಲಿ, ಅವನಿಂದ ಪದ್ಯಗಳನ್ನು ಅನುವಾದ ಮಾಡಿಕೊಂಡುದಕ್ಕೆ ಪೊನ್ನ ಉತ್ತರಕೊಡಬೇಕಾಗಿತ್ತು. ಪೊನ್ನನ ಮಾತು ಅವನ 'ಧೀರತನ'ವನ್ನು ಸೂಚಿಸುತ್ತದೆ ಎಂಬುದಾಗಿ ಶ್ರೀಯವರು ಹೇಳುವುದು ಸರಿಯಾದ ಮೌಲ್ಯೀಕರಣವಲ್ಲ.

ಕವಿಗಳ ಕಾಲ ಮತ್ತು ಕೃತಿ ಚರ್ಚೆಯಲ್ಲಿ ಅನೇಕ ಬಾರಿ ಶ್ರೀಯವರು ಕವಿಚರಿತೆಕಾರರನ್ನು ಉಲ್ಲೇಖಿಸಿ, ಅವರ ಅಭಿಪ್ರಾಯವನ್ನು ಒಪ್ಪಿಕೊಳ್ಳುತ್ತಾರೆ. ಇದೆಲ್ಲಿಯೂ ಅವರ ಸ್ವಂತ ಅಭಿಪ್ರಾಯಕ್ಕೆ ಧಕ್ಕೆ ಒದಗಿಸುವುದಿಲ್ಲ; ಪೂರಕ ಮಾತಷ್ಟೆ. ಪಂಪ, ಪೊನ್ನ, ರನ್ನರನ್ನು ರತ್ನತ್ರಯರೆಂದು ಶ್ರೀಯವರು ಪ್ರಸ್ತಾಪಿಸುವಾಗ, ಅವರಿಗಿಂತಲೂ ಹಿಂದೆಯೇ ಈ ಮಾತಿನ ಉಲ್ಲೇಖವಿರಬೇಕೆಂದು ತೋರುವುದು. ರನ್ನ 'ವೈಶ್ಯಕುಲ'ದವನೆಂದು ಅವನಿಂದಲೇ ಗೊತ್ತಾಗುವುದರಿಂದ, ಶ್ರೀಯವರು ಹೇಳುವ 'ಬ್ರಾಹ್ಮಣನೆಂಬ' ವಾದ ಉಳಿಯುವುದಿಲ್ಲ. ಹಾಗೆಯೇ ಅವನ 'ಸಾಹಸಭೀಮವಿಜಯ' "ನಾಟಕವಾಗಿ ಬರೆದ ಗ್ರಂಥ ಚಂಪೂವಾಗಿ ಮಾರ್ಪಟ್ಟಿರಬಹುದು" ಎಂಬ ಹೇಳಿಕೆ ಕೂಡ. ಕವಿಯಲ್ಲಿ ನಾಟಕೀಯ ಪ್ರಜ್ಞೆ ಇದ್ದ ಮಾತ್ರಕ್ಕೆ ಅದನ್ನು ಕಾವ್ಯವಾಗಿ ಪರಿವರ್ತಿತವಾದ ನಾಟಕವೆಂದು ಹೇಳುವುದು ಒಪ್ಪುವಂಥ ಮಾತಲ್ಲ. ಅವನು ಅದನ್ನು ಸತ್ಯಾಶ್ರಯ ಇರಿವಬೆಡಂಗನನ್ನು ಅಭೇದಗೊಳಿಸಿ ಬರೆದದ್ದೆಂದು ಸ್ಪಷ್ಟವೇ ಇದೆ. ನಾಟಕ ರಚನೆಯಲ್ಲಿ ಹಾಗೆ ಮಾಡಲು ಬರುವುದಿಲ್ಲ. ಜೊತೆಗೆ, ಕಾವ್ಯದಲ್ಲಿಯೇ ಕವಿ ಇದು ಕಾವ್ಯವೆಂದು ಸ್ಪಷ್ಟಪಡಿಸಿರುವಾಗ ಶ್ರೀಯವರು ಅದನ್ನು ಬೇರೆಡೆಗೆ ಎಳೆಯುವುದು ಸರಿಕಾಣದು. ಅದನ್ನು ಅವರು ನಾಟಕಕ್ಕೆ ಪರಿವರ್ತಿಸಿರುವುದು ಬೇರೆಯ ಮಾತು. ಪಂಪನೊಡನೆ ರನ್ನನನ್ನು ಹೋಲಿಸಿ ಶ್ರೀಯವರು ಹೇಳುವ ಮಾತಿದು: "ಉನ್ನತಿಯನ್ನೂ ಶಕ್ತಿಯನ್ನೂ ಬಿಡದೆ ಪಂಪನಿಗೆ ಸರಿತೂಕವಾಗಿ, ಕಡೆಗೆ ಒಂದು ಕೈ ಮೇಲೋ ಎಂಬಂತೆ ಸಾಹಸಭೀಮವಿಜಯದಲ್ಲಿ ಕಾಣುವನು" 'ಶಕ್ತಿ'ಯಲ್ಲಿ ಈ ಮಾತು ಸರಿ; ಆದರೆ 'ಉನ್ನತಿ'ಯಲ್ಲಿ ಅಲ್ಲ.

(ಮುಂದುವರೆಯುವುದು)

HONGANASU KANNADA MONTHLY NEWS LETTER, RNI No. KAR/KAN/2015/64049 REGISTERED
Post office Registration No. RNP/KA/BGS/2229/2021-2023 dt. 28-12-2020 Office of Posting: Bengaluru PSO, Bengaluru 560026
Price: Annual Subscription Rs. 20/- Date of Publishing and Posting: 30-04-2025

ಪ್ರಕಟಣೆ

## ನಾದಯೋಗಿ ಶ್ರೀ ಭೈರವಿ ಕೆಂಪೇಗೌಡ ದತ್ತಿ ಆಶ್ರಯದಲ್ಲಿ ಭೈರವಿ ರಾಗದಲ್ಲಿ ಗಾಯನ ಸ್ಪರ್ಧೆ

ಶ್ರೀ ಕೆ. ಮೋಹನ್‌ದೇವ್ ಆಳ್ವ ಡಾ.ಎಂ.ಕೆ. ಶೈಲಜಾ ಆಳ್ವ ಅವರು ಸ್ಥಾಪಿಸಿರುವ ನಾದಯೋಗಿ ಶ್ರೀ ಭೈರವಿ ಕೆಂಪೇಗೌಡ ದತ್ತಿ ಆಶ್ರಯದಲ್ಲಿ ಭೈರವಿ ರಾಗದಲ್ಲಿ (ಉತ್ತರಾದಿ ಅಥವಾ ದಕ್ಷಿಣಾದಿ) ಗಾಯನ ಸ್ಪರ್ಧೆಯನ್ನು ಬಿ.ಎಂ.ಶ್ರೀ. ಪ್ರತಿಷ್ಠಾನವು ೧೫ ರಿಂದ ೨೦ ವರ್ಷ ವಯಸ್ಸಿನವರಿಗೆ ಏರ್ಪಡಿಸಿದೆ.

ಸ್ಪರ್ಧೆಯು **೧೧ ಮೇ ೨೦೨೫ ಭಾನುವಾರ** ನಡೆಯಲಿದೆ. ಈ ಸ್ಪರ್ಧೆಯಲ್ಲಿ ಪಾಲ್ಗೊಳ್ಳಲು ಬಯಸುವವರು ಮೇ ೮ ಗುರುವಾರ ಸಂಜೆ ೫–೦೦ ಗಂಟೆಯ ಒಳಗೆ ಬಿ.ಎಂ.ಶ್ರೀ.ಪ್ರತಿಷ್ಠಾನ, ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ३ನೇ ಮುಖ್ಯರಸ್ತೆ, ನರಸಿಂಹರಾಜ ಕಾಲೋನಿ, ಬೆಂಗಳೂರು–೫೬೦೦೦೪ ಇಲ್ಲಿ ಹೆಸರನ್ನು ವಯಸ್ಸಿನ ಆಧಾರಪತ್ರದೊಂದಿಗೆ ಖುದ್ದಾಗಿ ನೋಂದಾಯಿಸಿಕೊಳ್ಳಬೇಕು. ವಿಜೇತರಾದವರಿಗೆ ಪ್ರಥಮ ಬಹುಮಾನ ೪,೦೦೦/– ರೂಪಾಯಿ, ದ್ವಿತೀಯ ಬಹುಮಾನ–೩,೦೦೦/–ರೂಪಾಯಿ ಮತ್ತು ತೃತೀಯ ಬಹುಮಾನ–೨,೦೦೦/–ರೂಪಾಯಿಗಳನ್ನು ನಗದು ರೂಪದಲ್ಲಿ ಪ್ರಶಸ್ತಿಪತ್ರಗಳೊಂದಿಗೆ ಪ್ರತ್ಯೇಕವಾಗಿ ಎರಡೂ ವಿಭಾಗದ ಸ್ಪರ್ಧಿಗಳಿಗೆ ನೀಡಲಾಗುತ್ತದೆ. ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲ ಸ್ಪರ್ಧಿಗಳಿಗೂ ಪ್ರಮಾಣಪತ್ರಗಳನ್ನು ನೀಡಲಾಗುವುದು.

**ಹೆಚ್ಚಿನ ವಿವರಗಳಿಗೆ ಸಂಪರ್ಕಿಸಿ : ೯೯೬೨೨೮೧೨೧೨೬**

ಅರ್ಜಿಗಳು ಪ್ರತಿಷ್ಠಾನದ ಕಛೇರಿಯಲ್ಲಿ ದೊರೆಯುತ್ತವೆ.

ಪ್ರಕಟಣೆ

ಬಿ.ಎಂ.ಶ್ರೀ. ಪ್ರತಿಷ್ಠಾನದಲ್ಲಿ ರಾ.ಕೃ. ಶ್ರೀಧರಮೂರ್ತಿ ಅವರು ಸ್ಥಾಪಿಸಿರುವ ದತ್ತಿಯಿಂದ ಪ್ರವಾಸ ಸಾಹಿತ್ಯ ಮತ್ತು ಭಾಷಾಂತರ ಕುರಿತ ಲೇಖನಗಳನ್ನು ಸ್ಪರ್ಧೆಗಾಗಿ ಆಹ್ವಾನಿಸಲಾಗಿದೆ. **'ಪ್ರವಾಸದ ಸ್ಮರಣೀಯ ಅನುಭವಗಳು'** ಮತ್ತು **'ಭಾಷಾಂತರದ ಪ್ರಯೋಜನಗಳು'** ವಿಷಯಗಳನ್ನು ಕುರಿತು ೧೦ ಪುಟಗಳು ಅಥವಾ ೨೦೦೦ ಶಬ್ದಗಳ ಮಿತಿಯಲ್ಲಿ ರಚಿಸಿ ಡಿ.ಟಿ.ಪಿ./ಬೆರಳಚ್ಚು ಮಾಡಿಸಿದ ಲೇಖನಗಳನ್ನು ೧೫.೦೫.೨೦೨೫ರ ಒಳಗೆ ಗೌರವ ಕಾರ್ಯದರ್ಶಿ, ಬಿ.ಎಂ.ಶ್ರೀ. ಪ್ರತಿಷ್ಠಾನ ಇವರಿಗೆ ಕಳಿಸಿಕೊಡಬೇಕು. ಲೇಖನಗಳು ಈ ಸ್ಪರ್ಧೆಗಾಗಿಯೇ ಬರೆದವುಗಳಾಗಿರಬೇಕು, ಈ ಹಿಂದೆ ಎಲ್ಲಿಯೂ ಪ್ರಕಟವಾಗಿರಬಾರದು ಮತ್ತು ಪ್ರಸಾರವಾಗಿರಬಾರದು. ತಲಾ ೧,೫೦೦/–ರೂ. ನಗದು ಪುರಸ್ಕಾರವನ್ನು ಮೇ ತಿಂಗಳ ೨೦ರಂದು ನಡೆಯುವ ಸಮಾರಂಭದಲ್ಲಿ ನೀಡಲಾಗುವುದು.

**Printed & Published by :** BMSRI PRATISHTANA, B.M.Sri Pratishtana Road, 3rd Main, N.R. Colony, Bengaluru - 560004
Editor : **Dr. Belavadi K. Prabhakar**

ಅಚ್ಚಾದ ಪುಸ್ತಕ Printed Book

ಇವರಿಗೆ,

ಇವರಿಂದ :
**ಬಿ.ಎಂ.ಶ್ರೀ. ಪ್ರತಿಷ್ಠಾನ**
ಬಿ.ಎಂ.ಶ್ರೀ. ಪ್ರತಿಷ್ಠಾನದ ರಸ್ತೆ, ३ನೇ ಮುಖ್ಯರಸ್ತೆ
ನರಸಿಂಹರಾಜ ಕಾಲೋನಿ, ಬೆಂಗಳೂರು - ೫೬೦೦೦೪
ಮೊಬೈಲ್ : ೯೯೬೨೨೮೧೨೧೨೬